# ಕರ್ನಾಟಕ ಸರ್ಕಾರ

## ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಚಿಕ್ಕಮಗಳೂರು,

## 2021-22

# ಪರ್ಯಾಯ ಶೈಕ್ಷಣಿಕ ಯೋಜನೆ

**ವಿಷಯ:-ಪರಿಸರ ಅಧ್ಯಯನ**

**ತರಗತಿ:-3ನೇ ತರಗತಿ**

**ರಚನೆಗೆ ಸಹಕಾರ:- ಶೃಂಗೇರಿ ಶೈಕ್ಷಣಿಕ ವಲಯ**

**ಪರಿಕಲ್ಪನೆ ಮತ್ತು ಮಾರ್ಗದರ್ಶನ**

ಪ್ರಾಂಶುಪಾಲರು

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ

ರಾಮನಹಳ್ಳಿ, ಚಿಕ್ಕಮಗಳೂರು

Design by:Sathyaprakash R M Art Teacher

# ಪರಿವಿಡಿ


| ಕ್ರ. ಸಂ. | ಕಲಿಕಾಂಶ/ ಮೈಲಿಗಲ್ಲು | ಪುಟ ಸಂಖ್ಯೆ |
|---|---|---|
| 01. | ಮೈಲಿಗಲ್ಲು–1<br>ಸಂಬಂಧಗಳು | 3–7 |
| 02. | ಮೈಲಿಗಲ್ಲು–2<br>ಹಬ್ಬ–ಜಾತ್ರೆ–ಸಮಾರಂಭ | 8–13 |
| 03. | ಮೈಲಿಗಲ್ಲು–3<br>ವಸತಿ | 14–18 |
| 04. | ಮೈಲಿಗಲ್ಲು–4<br>ಮಾನವನ ಅಗತ್ಯತೆಗಳು | 19–24 |


DIET CHIKKA...

| ಪರಿಸರ ಅಧ್ಯಯನ | ಪಾಠ–1 (ಮೈಲಿಗಲ್ಲು–1)<br>ಸಂಬಂಧಗಳು (ಕಲಿಕಾಂಶ) | 3ನೆಯ ತರಗತಿ<br>1/4 |
|---|---|---|

ಕಲಿಕಾ ಫಲಗಳು:

1) ಮೂರು ತಲೆಮಾರುಗಳ ಸದಸ್ಯರ ಸಂಬಂಧಗಳನ್ನು ಅರಿಯುವುದು ಮತ್ತು ಸಂಬಂಧಗಳ ಸರಳ ವಂಶವೃಕ್ಷವನ್ನು ರಚಿಸುವುದು.
2) ಕುಟುಂಬದ ಸದಸ್ಯರ ಅನುವಂಶೀಯ ಲಕ್ಷಣಗಳಲ್ಲಿರುವ ಸಾಮ್ಯತೆಯನ್ನು ಗುರುತಿಸುವುದು.

- **ಸೂಚನೆಗಳು:** ಇಲ್ಲಿರುವ ಕಥಾರೂಪದ ಕಲಿಕಾಂಶವನ್ನು ಒಂದೆರೆಡು ಬಾರಿ ಓದಿ ಅರ್ಥೈಸಿಕೊಂಡು, ಮಕ್ಕಳಿಗೆ ಕಥೆಯನ್ನು ಹೇಳುವುದು.
- ನಿರೂಪಿಸುವ ಸಂದರ್ಭದಲ್ಲಿ ಆಗಾಗ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುತ್ತ ಈ ಕಲಿಕಾಂಶಕ್ಕೆ ಸಂಬಂಧಿಸಿದಂತೆ ಅವರಲ್ಲಿ ಕುತೂಹಲ ಕೆರಳಿಸುವುದು.
- ಅವರ ಮನದಲ್ಲಿ ಮೂಡಿದ ಪ್ರಶ್ನೆ ಸಮಸ್ಯೆಗಳಿಗೆ ಉತ್ತರಿಸುವುದು.
- ಮಾರ್ಗದರ್ಶನಕ್ಕಾಗಿ ಶಾಲಾ ಶಿಕ್ಷಕರನ್ನು ಸಂಪರ್ಕಿಸುವುದು.

************************************************************************************

ರಾಜುವಿನ ಶಾಲೆಗೆ ಬೇಸಿಗೆ ರಜೆ ನೀಡಿದರು. ರಾಜು ತಂಗಿ ಸಂಗೀತಳ ಬಳಿ ಬಂದು, 'ನಾನು–ನೀನು ಅಪ್ಪನ ಜೊತೆ ನಾಳೆ ಅಜ್ಜನ ಮನೆಗೆ ಹೋಗೋಣ್ವಾ ಎಂದ'? ಅದಕ್ಕೆ ಸಂಗೀತ ಹೌದಣ್ಣ, "ನನಗೂ ತುಂಬ ಖುಷಿಯಾಗುತ್ತೆ. ಅಪ್ಪನ ಬಳಿ ಹೋಗಿ ಕೇಳೋಣ್ವಾ" ಎಂದಳು. ಇಬ್ಬರೂ ಸೇರಿ ಅಪ್ಪನ ಬಳಿ ಬಂದು ಅಜ್ಜನ ಮನೆಗೆ ಹೋಗುವ ವಿಷಯ ಪ್ರಸ್ತಾಪಿಸಿದರು. ಅದಕ್ಕೆ ಖಂಡಿತ ಹೋಗೋಣ ಮಕ್ಕಳೆ ಹೋಗುವಾಗ ಅಮ್ಮನನ್ನು ಕರೆದುಕೊಂಡು ಹೋಗೋಣ ಎಂದರು. ಮಕ್ಕಳಿಗೆ ಅಂದು ಅಜ್ಜನ ಮನೆಗೆ ಹೋಗುವ ಸಂಭ್ರಮದಲ್ಲಿ ರಾತ್ರಿ ನಿದ್ದೆಯೇ ಬರಲಿಲ್ಲ. ಬೆಳಗಾಗುವುದನ್ನೇ ಕಾಯುತ್ತಿದ್ದರು.






ಬೆಳಗ್ಗೆ ಎದ್ದು ಅಪ್ಪ ಹೇಳಿದ ಸಮಯಕ್ಕೆ ಎದ್ದು ಸಿದ್ದರಾಗಿ ನಿಂತರು. ಬಸ್ಸಿನಲ್ಲಿ ಅಜ್ಜನ ಮನೆ ಸೇರಿದರು. ರಾಜು ಅಜ್ಜನ ಮನೆ ಸಮೀಪಿಸುತ್ತಿದ್ದಂತೆ ಅಮ್ಮನ ಕೈಯಿಂದ ತನ್ನ ಕೈಯನ್ನು ಬಿಡಿಸಿಕೊಂಡು ಅಜ್ಜನ ಮನೆಗೆ ಓಡಿದನು. ಸಂಗೀತಳು ಸಹ ರಾಜುವನ್ನೇ ಅನುಸರಿಸಿದಳು. ರಾಜು–ಸಂಗೀತರ ಅಜ್ಜನ ಮನೆ ತುಂಬ ದೊಡ್ಡ ಮನೆ. ಆಟವಾಡಲು ವಿಶಾಲವಾದ ಮನೆ. ಬಹಳಷ್ಟು ಕೋಣೆಗಳು ದೊಡ್ಡ ಅಡುಗೆ ಮನೆ. ಮನೆಯ ತುಂಬ ಜನ. ರಾಜು ಮತ್ತು ಸಂಗೀತಳನ್ನು ನೋಡಿದ ಮಲ್ಲಜ್ಜ ಮತ್ತು ಸೀತಜ್ಜಿಗೆ ತುಂಬ ಖುಷಿಯಾಯಿತು. 'ನೀವುಗಳು ಬರತ್ತೀರೆಂದು ನಾವು ನಿರೀಕ್ಷೆ ಮಾಡಿದ್ದೆವು ಬಂದಿರಲ್ಲ ಸಂತೋಷವಾಯಿತು'. ಎಂದರು ಸೀತಜ್ಜಿ. ರಾಜುವಿನ ತಂದೆ ಮತ್ತು ತಾಯಿ ಮನೆಗೆ ಬಂದವರೆ ಹಿರಿಯರ ಕಾಲಿಗೆ ನಮಸ್ಕಾರ ಮಾಡಿದರು. ಇದನ್ನು ನೋಡಿದ ರಾಜು ಸಂಗೀತ ಅವರನ್ನು ಅನುಸರಿಸಿದರು.

ಹೀಗೆ ಮಾತನಾಡುತ್ತಿರಬೇಕಾದರೆ ಹೊಲಕ್ಕೆ ಹೋಗಿದ್ದ ರಾಜು ಸಂಗೀತರ ಚಿಕ್ಕಪ್ಪ ರಾಮ ಹಾಗೂ ಚಿಕ್ಕಮ್ಮ ಗಿರಿಜ ಬಂದರು. ಅವರು ಇವರ ಜೊತೆ ಮಾತನಾಡಿದರು. ರಾಮು ಚಿಕ್ಕಪ್ಪ ರಾಜುವಿನ ಅಪ್ಪನ ಹಾಗೇ ಹೋಲುತ್ತಿದ್ದರು. ಸಂಗೀತ ರಾಮು ಚಿಕ್ಕಪ್ಪನನ್ನು ನೋಡಿ ಇವರು ನಮ್ಮ ಅಪ್ಪನ ಹಾಗೆ ಇದ್ದಾರೆ, ಎಂದಳು. ರಾಜು ಅಜ್ಜನ ಬಳಿ 'ದೊಡ್ಡಪ್ಪ ಸಣ್ಣತ್ತೆ ಇವರೆಲ್ಲ ಎಲ್ಲಿ ಹೋಗಿದ್ದಾರೆ?' ಎಂದನು. ಅದಕ್ಕೆ ಸೀತಜ್ಜಿ ನೋಡಿ ಮಕ್ಕಳೇ, ಈಗ ಮಳೆಗಾಲ ಹತ್ರ ಬರ್ತಿದೆ ಅಲ್ವಾ ಅದಕ್ಕೆ ನಿಮ್ಮ ದೊಡ್ಡಪ್ಪ, ಚಿಕ್ಕಪ್ಪ, ಸಣ್ಣತ್ತೆ, ಮಾವ ಎಲ್ಲರೂ ಹೊಲಕ್ಕೆ ಹೋಗಿದ್ದಾರೆ. ಇನ್ನೇನು ಬರುವ ಹೊತ್ತಾಯ್ತು ಎಂದರು. ಮಕ್ಕಳು ಅಲ್ಲಿಂದ ಅಡುಗೆ ಮನೆಗೆ ಓಡಿದರು. ಅಲ್ಲಿ ದೊಡ್ಡಮ್ಮ ಮತ್ತು ದೊಡ್ಡತ್ತೆ

ಅಡುಗೆ ಮಾಡುತ್ತಿದ್ದರು. ಅವರನ್ನು ಮಾತನಾಡಿಸಿದರು. ದೊಡ್ಡತ್ತೆ ರಾಜುವಿಗೆ ಇಷ್ಟ ಅಂತ ಕೋಡುಬಳೆ ಮಾಡುತ್ತಿದ್ದರು.






ಸಂಗೀತ ದೊಡ್ಡಮ್ಮನ ಬಳಿ ನವೀನಣ್ಣ. ವಿಮಲಕ್ಕ, ಸರೋಜಕ್ಕ, ದಿನೇಶಣ್ಣ ಎಲ್ಲಿ ಹೋಗಿದ್ದಾರೆ? ಎಂದಳು. ಎಲ್ಲರೂ ಹೊರಗೆ ಆಟವಾಡಲು ಹೋಗಿದ್ದಾರೆ ಇನ್ನೇನು ನೀವು ಬಂದಿದ್ದೀರಿ ಎಂದು ತಿಳಿದರೆ ಈಗ ಬಂದು ಬಿಡುತ್ತಾರೆ. ಎಂದರು. ರಾಜುವಿನ ಅಮ್ಮ ನಂದಿತ ಒಳ ಮನೆಗೆ ಹೋದರು. ಅವರ ಪತಿ ವೆಂಕಟೇಶ ಹಾಗೂ ಮಕ್ಕಳು ಅವರನ್ನು ಹಿಂಬಾಲಿಸಿದರು. ನಂದಿತ ಒಳಮನೆಗೆ ಹೋಗಿ ಮಲಗಿದ್ದ ನಾದಿನಿ ಚಂದ್ರಿಕಳನ್ನು ಮಾತನಾಡಿಸಿದರು. ತುಂಬ ಸೊರಗಿದಂತೆ ಕಂಡ ಅವರು ನಿಧಾನವಾಗಿ ಎದ್ದು ಕುಳಿತರು. ಹೇಗಿದ್ದೀಯಮ್ಮ ಎಂದು ವೆಂಕಟೇಶ ಕೇಳಿದರು. ಆಗ ಸಂಗೀತ “ಅಪ್ಪ ಅತ್ತೆಗೆ ಏನಾಗಿದೆ” ಎಂದು ಕೇಳಿದಳು. ಆಗ ರಾಜು “ಪಾಪ, ಅತ್ತೆಗೆ ಒಂದು ಕಾಲು ಸರಿ ಇಲ್ಲ. ಅವರಿಗೆ ನಡೆಯೋಕೆ ಆಗುತ್ತಿಲ್ಲ” ಎಂದನು. ಆಗ ಅಮ್ಮ ನಂದಿತ “ಇವಳಿಗೆ ಚಿಕ್ಕಳಿರುವಾಗ ಪೋಲಿಯೋ ಆಗಿ ಒಂದು ಕಾಲು ನಡೆಯಲು ಆಗುತ್ತಿಲ್ಲ” ಎಂದಳು. ತಂದಿದ್ದ ಹಣ್ಣುಗಳನ್ನು ಅವರಿಗೆ ನೀಡಿ ಪ್ರೀತಿಯಿಂದ ಮಾತನಾಡಿಸಿದರು. ಮನೆಯಲ್ಲಿದ್ದ ಎಲ್ಲರನ್ನೂ ಮಾತನಾಡಿಸಿ ಅಜ್ಜನ ಬಳಿ ಬರುವಷ್ಟರಲ್ಲಿ ಹೊರಗೆ ಹೋಗಿದ್ದ ಎಲ್ಲರೂ ಬಂದರು. ರಾಜು ಸಂಗೀತ ಅವರೆಲ್ಲರನ್ನೂ ಒಟ್ಟಿಗೆ ನೋಡಿ ತುಂಬ ಖುಷಿ ಪಟ್ಟರು. ಎಲ್ಲರೂ ಮನೆಗೆ ಬಂದ ನೆಂಟರನ್ನು ಆತ್ಮೀಯವಾಗಿ ಮಾತನಾಡಿಸಿದರು.

ಈಗ ರಾಜುವಿಗೆ ಇವರೆಲ್ಲರನ್ನು ನೋಡಿ ಅಜ್ಜನ ಬಳಿ ಸಾಗಿ ‘ಇಷ್ಟು ಜನ ನೀವು ಒಟ್ಟಿಗೆ ಇರ್ತೀರಾ? ನಮ್ಮ ಮನೆಯಲ್ಲಿ ನಾನು, ತಂಗಿ ಅಪ್ಪ ಮತ್ತು ಅಮ್ಮ ಇಷ್ಟೆ ಜನ ಇರೋದು ಇಲ್ಲಿ ನೋಡಿದರೆ ನೀವು ಇಷ್ಟು ಜನ ಇದೀರಿ! ಎಂದನು. ಮನೆಯ ಸದಸ್ಯರು ರಾಜುವಿನ ಪ್ರಶ್ನೆ ಕೇಳಿ ನಕ್ಕರು.







ಆಗ ಸೀತಜ್ಜಿ ರಾಜುವನ್ನು ತನ್ನ ತೊಡೆಯ ಮೇಲೆ ಕೂರಿಸಿಕೊಂಡು “ನೋಡು ಮಗ ಇಲ್ಲಿ ನಾವು ಇಷ್ಟು ಜನ ಒಟ್ಟಾಗಿ ಒಂದೇ ಮನೆಯಲ್ಲಿ ಇದಿವಲ್ಲಾ ಇದಕ್ಕೆ **ದೊಡ್ಡಕುಟುಂಬ** ಅಥವಾ **ಅವಿಭಕ್ತ ಕುಟುಂಬ** ಅನ್ನೀವಿ. ಇಲ್ಲಿ ನಾವೆಲ್ಲ ಒಟ್ಟಾಗಿ ಕೆಲ್ಸ ಮಾಡ್ತೀವಿ. ಒಟ್ಟಿಗೆ ಇರ್ತೀವಿ. ಒಬ್ಬರಿಗೊಬ್ಬರೂ ಸಹಾಯ ಮಾಡ್ಕೊಳ್ತೀವಿ ಅಷ್ಟೆ ಏಕೆ? ನಾವೆಲ್ಲ ಒಟ್ಟಿಗೆ ಕುಳಿತು ಊಟ ಮಾಡ್ತೀವಿ. ಹಾಗಾಗಿ ನಾವೆಲ್ಲ ಒಟ್ಟಿಗೆ ಬದುಕಬೇಕಾದರೆ ದೊಡ್ಡ ಮನೆ ಬೇಕು. ಅದಕ್ಕೆ ನಿಮ್ಮ ಮುತ್ತಜ್ಜ ಇಷ್ಟು ದೊಡ್ಡ ಮನೆಯನ್ನು ಆಗಿನ ಕಾಲದಲ್ಲೇ ಕಟ್ಟಿಸಿದ್ದಾರೆ. ನಿಮ್ಮಅಪ್ಪ ವೆಂಕಟೇಶ ಹಾಗೂ ಅಮ್ಮ ನಂದಿತಳಿಗೆ ಪೇಟೆಯಲ್ಲಿ ದೊಡ್ಡ ಕೆಲಸ ಸಿಕ್ಕಿದ್ದರಿಂದ ನೀವು ಅವರ ಜೊತೆ ಪೇಟೆಯಲ್ಲಿ ಸಣ್ಣ ಮನೇಲಿ ಇದ್ದೀರಿ. ನೀವು ಇರುವ ಮನೆಯನ್ನು **ಸಣ್ಣ ಕುಟುಂಬ** ಅಥವಾ **ವಿಭಕ್ತ ಕುಟುಂಬ** ಅನ್ನಾರೆ” ಎಂದರು.

ಅಷ್ಟರಲ್ಲಿ ವನಜ ದೊಡ್ಡಮ್ಮ “ಎಲ್ಲರೂ ಬನ್ನಿ, ಒಟ್ಟಿಗೆ ಊಟ ಮಾಡೋಣ” ಎಂದರು. ಹಿರಿಯರು, ಮಕ್ಕಳು ಎಲ್ಲರೂ ಸೇರಿ ಊಟ ಮಾಡಿದರು. ರಾಜು ಸಂಗೀತ ಒಂದಷ್ಟು ದಿನ ಅಜ್ಜನ ಮನೆಯಲ್ಲಿದ್ದು ಪುನಃ ಪೇಟೆಯ ಮನೆಗೆ ಹೊರಟರು.

ರಾಜು ಸಂಗೀತಳ ಬಳಿ “ಅಜ್ಜಿ ಹೇಳಿದರಲ್ವಾ ಅವಿಭಕ್ತ ಕುಟುಂಬ ಅಂತಾ ಎಷ್ಟು ಚಂದ ಅಲ್ವಾ, ಎಲ್ಲರೂ ಪ್ರೀತಿಯಿಂದ ಮಾತನಾಡಿಸೋರು. ನನಗೆ ಆ ಮನೆಗಿಂತ ಈ ಮನೆನೆ ಇಷ್ಟ” ಎಂದ. ಅದಕ್ಕೆ ಸಂಗೀತಳು ಹೌದಣ್ಣ ಇಲ್ಲಿ ಆಟ ಆಡ್ಲಿಕ್ಕೆ ನವೀನಣ್ಣ, ವಿಮಲಕ್ಕ, ಸರೋಜಕ್ಕ, ತೊಟ್ಟಿಲ್ಲಿ ಮಲಗಿದ ಮಾವನ ಮಗಳು ಸುಪ್ರಿತ ಇವರೆಲ್ಲರನ್ನು ಬಿಟ್ಟು ಹೋಗಲು ನನಗೂ ಮನಸ್ಸಿಲ್ಲ’ ಎಂದಳು. ಅಪ್ಪ ಹೊರಡಿ ಮಕ್ಕಳೇ ಎಂದಾಗ ಎಲ್ಲರೂ ಹಿರಿಯರ ಕಾಲಿಗೆ ನಮಸ್ಕರಿಸಿ ಹೊರಟು ನಿಂತರು. ಮನೆಯ ಎಲ್ಲರೂ ದಾರಿಯವರೆಗೆ ಬಂದು ಇವರನ್ನು ಕಳುಹಿಸಿ ಕೊಟ್ಟರು.

DIET CHIKMAGALURU



ಬೀಳ್ಕೊಡುತ್ತಿರುವುದು



ಅವಿಭಕ್ತ ಕುಟುಂಬ

| ಪರಿಸರ ಅಧ್ಯಯನ | ಪಾಠ–1 (ಮೈಲಿಗಲ್ಲು–1)<br>ಸಂಬಂಧಗಳು (ಅಭ್ಯಾಸ) | 3ನೆಯ ತರಗತಿ<br>2/4 |
|---|---|---|

DIET CHIKKAMAGALURU

## ಪ್ರಶ್ನಾವಳಿ

**ಸೂಚನೆ:** ಈ ಕೆಳಗಿನ ಪ್ರಶ್ನೆಗಳಿಗೆ ಮಕ್ಕಳಿಂದ ಉತ್ತರವನ್ನು ಮೌಖಿಕವಾಗಿ ಪಡೆದು ನಂತರ ಇದೇ ಹಾಳೆಯಲ್ಲಿ ಬರೆಸಿ ಈ ಹಾಳೆಯನ್ನು ಶಿಕ್ಷಕರಿಗೆ ಮೌಲ್ಯಮಾಪನಕ್ಕಾಗಿ ನೀಡಿರಿ.

**ಪ್ರಶ್ನೆಗಳಿಗೆ ಉತ್ತರಿಸಿ:**

1. ರಾಜು ಮತ್ತು ಸಂಗೀತ ಯಾರ ಮನೆಗೆ ಹೋಗಲು ಇಷ್ಟ ಪಟ್ಟರು?
2. ರಾಜು–ಸಂಗೀತರ ಅಜ್ಜ ಅಜ್ಜಿಯ ಹೆಸರೇನು?
3. ಕೋಡುಬಳೆ ಮಾಡಿದವರು ಯಾರು?
4. ದೊಡ್ಡ ಕುಟುಂಬ ಎಂದರೇನು?
5. ದೊಡ್ಡ ಕುಟುಂಬದಲ್ಲಿ ಜನ ಹೇಗೆ ಸಹಬಾಳ್ವೆ ನಡೆಸುತ್ತಾರೆ?
6. ರಾಜುವಿನ ತಂದೆಯಂತೆ ಹೋಲುತ್ತಿದ್ದವರು ಯಾರು?
7. ನಿನ್ನ ಮನೆಯಲ್ಲಿ ನೀನು ಯಾರನ್ನು ಹೋಲುತ್ತೀಯಾ?
8. ರಾಜುವಿಗೆ ಅವಿಭಕ್ತ ಕುಟುಂಬ ಇಷ್ಟವಾಗಲು ಕಾರಣವೇನು?
9. ರಾಜುವಿನ ತಂದೆತಾಯಿ ಯಾರ ಕಾಲಿಗೆ ನಮಸ್ಕರಿಸಿದರು? ಏಕೆ?
10. ನೀವು ಮನೆಯ ಹಿರಿಯರನ್ನು ಯಾವ ರೀತಿ ಗೌರವಿಸುತ್ತೀರಿ?
11. ಸಣ್ಣ ಕುಟುಂಬಕ್ಕೆ ಏನೆಂದು ಕರೆಯುತ್ತಾರೆ?
12. ನೀವು ಯಾವ ಕುಟುಂಬದಲ್ಲಿ ಇರಲು ಇಷ್ಟಪಡುವಿರಿ? ಏಕೆ?



DIET CHIKKAMAGALURU

| | ಸಂಬಂಧಗಳು (ಅಭ್ಯಾಸ) | 3/4 |
|---|---|---|

**ಸೂಚನೆ:** ಈ ಕೆಳಗಿನ ಪ್ರಶ್ನೆಗಳಿಗೆ ಮಕ್ಕಳಿಂದ ಉತ್ತರವನ್ನು ಮೌಖಿಕವಾಗಿ ಪಡೆದು ನಂತರ ಇದೇ ಹಾಳೆಯಲ್ಲಿ ಬರೆಸಿ ಈ ಹಾಳೆಯನ್ನು ಶಿಕ್ಷಕರಿಗೆ ಮೌಲ್ಯಮಾಪನಕ್ಕಾಗಿ ನೀಡಿರಿ.

**1) ಅವಿಭಕ್ತ ಅಥವಾ ವಿಭಕ್ತ ಕುಟುಂಬ ಎಂದು ಬಿಟ್ಟ ಸ್ಥಳದಲ್ಲಿ ಬರೆಯಿರಿ:**

1) ಅಪ್ಪ, ಅಮ್ಮ, ಮಗ ______________

2) ಅಜ್ಜ,ಅಜ್ಜಿ, ತಂದೆ,ತಾಯಿ, ಮಗ,ಮಗಳು ____________

3) ಅಜ್ಜ, ಅಜ್ಜಿ _________________

4) ತಂದೆ, ತಾಯಿ, ಮಗ, ಸೊಸೆ ಮೊಮ್ಮಗ _______________

**2) ಅಡಿಗೆರೆ ಎಳೆದ ಪದ ಗಮನಿಸಿ ವಾಕ್ಯ ಸರಿಪಡಿಸಿ ಬರೆಯಿರಿ:**

1) ಅಜ್ಜ ಅಜ್ಜಿ ಕುಟುಂಬದಲ್ಲಿ ಕಿರಿಯರಾಗಿರುತ್ತಾರೆ.
______________________________________________

2) ತಂದೆಯ ಮೊಮ್ಮಗನನ್ನು ದೊಡ್ಡಪ್ಪನೆಂದು ಕರೆಯುತ್ತಾರೆ.
______________________________________________

3) ವಿಕಲಚೇತನರನ್ನು (ದಿವ್ಯಾಂಗರನ್ನು) ನಾವು ಪ್ರೀತಿಯಿಂದ ನೋಡಿಕೊಳ್ಳಬಾರದು.
______________________________________________

4) ಅಪ್ಪನ ತಂದೆ ನನಗೆ ದೊಡ್ಡಪ್ಪ.
______________________________________________

**3) ವಿಕಲಚೇತನಕ್ಕೆ ಸಂಬಂಧಿಸಿದಂತೆ ಯಾವ ವಿಧಧ ವಿಕಲತೆ ಎಂದು ಗುರುತಿಸಿ ಬರೆಯಿರಿ:**

1) ರೇಡಿಯೋ, ಟಿ.ವಿ ಆಲಿಸುತ್ತೇನೆ ಆದರೆ ಚಿತ್ರಗಳು ಗೊತ್ತಾಗುವುದಿಲ್ಲ _________

2) ಟಿ.ವಿಯಲ್ಲಿ ಚಿತ್ರಗಳು ಕಾಣುತ್ತದೆ ಆದರೆ ಶಬ್ದ ಕೇಳುವುದಿಲ್ಲ.____________

3) ಕಣ್ಣು, ಕಿವಿ, ಬಾಯಿ ಸರಿ ಇದೆ ಆದರೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗಲು ಸಾಧ್ಯವಿಲ್ಲ._________

4) ಟಿ.ವಿ /ರೇಡಿಯೋ ಕುಟುಂಬ ಎಲ್ಲ ನನ್ನ ಸುತ್ತಮುತ್ತ ಇದ್ದರೂ ನನಗೆ ಏನೂ ಗೊತ್ತಾಗುವುದಿಲ್ಲ_____________

**4) ಒಗಟು ಬಿಡಿಸಿ ಬರೆಯಿರಿ:**

| | |
|---|---|
| 1) ಅಪ್ಪನಿಗಿಂತ ಚಿಕ್ಕವ ನಾನು ಅಪ್ಪನ ತಮ್ಮ ನಾನಾಗಿರುವೆ.<br><br>ನಾನು ಯಾರು? ____________ | 2) ಕಥೆ ಹೇಳುವೆ. ನಿಮ್ಮಪ್ಪನಿಗೆ ಅಮ್ಮ ನಾನು.<br><br>ನಾನು ಯಾರು?__________ |
| 3) ಹೆಗಲ ಮೇಲೆ ನಿನ್ನನ್ನು ಹೊರುವೆ. ಮನೆಯ ಹಿರಿಯ ನಾನಾಗಿರುವೆ ನಿನ್ನಪ್ಪನ ಅಪ್ಪ ನಾನು.<br><br>ನಾನು ಯಾರು? _______________ | 4) ನವಮಾಸ ನಿನ್ನನ್ನು ಹೊತ್ತಿರುವೆ, ಲಾಲನೆ ಪಾಲನೆ ಮಾಡಿರುವೆ. ನಿನಗೆ ಮೊದಲ ಗುರು ನಾನಾಗಿರುವೆ.<br><br>ನಾನು ಯಾರು? ______________ |


DIET CHIKKAMAGALURU

| ಪರಿಸರ ಅಧ್ಯಯನ | ಪಾಠ–1 (ಮೈಲಿಗಲ್ಲು–1)<br>ಸಂಬಂಧಗಳು (ಮೌಲ್ಯಮಾಪನ) | 3ನೆಯ ತರಗತಿ<br>4/4 |
|---|---|---|

DIET CHIKKAMAGALURU

# ವಂಶವೃಕ್ಷ ರಚಿಸಿ

**ಇಲ್ಲಿರುವ ವಂಶವೃಕ್ಷದಲ್ಲಿ ನಿಮ್ಮ ಮನೆಯ ಸದಸ್ಯರ ಹೆಸರುಗಳನ್ನು ಬರೆಯಿರಿ:**




- **ನಿನ್ನ ಹತ್ತಿರದ ಸ್ನೇಹಿತರನ್ನು (ಯಾರಾದರು ಒಬ್ಬರ) ಕೇಳಿ ಅವರ ವಂಶವೃಕ್ಷವನ್ನು ರಚಿಸಿರಿ:**

DIET CHIKKAMAGALURU

| ಪರಿಸರ ಅಧ್ಯಯನ | ಮೈಲಿಗಲ್ಲು-2<br>ಹಬ್ಬ-ಜಾತ್ರೆ-ಸಮಾರಂಭ (ಕಲಿಕಾಂಶ) | 3ನೇ ತರಗತಿ<br>1/5 |
|---|---|---|

**ಕಲಿಕಾ ಫಲಗಳು: 1)** ಸಮುದಾಯದಲ್ಲಿ ನಡೆಯುವ ಸಮಾರಂಭ, ಜಾತ್ರೆ ಮತ್ತು ಹಬ್ಬಗಳಲ್ಲಿ ಭಾಗವಹಿಸುವರು ಮತ್ತು ಅವುಗಳ ನಡುವೆ ಇರುವ ಪರಸ್ಪರ ಸಹಕಾರವನ್ನು ಗುರುತಿಸುವರು.

**ಸೂಚನೆಗಳು:**

- ಇಲ್ಲಿರುವ ಸಂಭಾಷಣೆ ರೂಪದ ಕಲಿಕಾಂಶವನ್ನು ಒಂದೆರಡು ಬಾರಿ ಓದಿ ಅರ್ಥೈಸಿಕೊಂಡು ಮಕ್ಕಳಿಗೆ ಹೇಳುವುದು.
- ನಿರೂಪಿಸುವ ಸಂದರ್ಭದಲ್ಲಿ ಆಗಾಗ್ಗೆ ಪ್ರಶ್ನೆಗಳನ್ನು ಕೇಳುತ್ತಾ ಉತ್ತರ ಪಡೆಯುವುದು.
- ಅವರ ಮನದಲ್ಲಿ ಮೂಡಿದ ಪ್ರಶ್ನೆಗಳಿಗೆ/ಸಮಸ್ಯೆಗಳಿಗೆ ಉತ್ತರಿಸುವುದು.
- ಮಾರ್ಗದರ್ಶನಕ್ಕಾಗಿ ಶಾಲಾ ಶಿಕ್ಷಕರನ್ನು ಸಂಪರ್ಕಿಸುವುದು.

**ಸಂಭಾಷಣಾ ರೂಪದ ಕಲಿಕಾಂಶ**



(ಹಬ್ಬ-ಜಾತ್ರೆ-ಸಮಾರಂಭಗಳಿಗೆ ಸಂಬಂಧಿಸಿದಂತೆ ಅಮ್ಮ ಮಗಳ ನಡುವೆ ನಡೆಯುವ ಸಂಭಾಷಣೆ)

ಅಮ್ಮ: ಸ್ಮಿತಾ, ಬೇಗನೆ ತಿಂಡಿ ತಿನ್ನು. ಇವತ್ತು ತುಂಬಾ ಕೆಲಸ ಇದೆ. ಮನೆ ಸ್ವಚ್ಛಗೊಳಿಸಿ ಮಾವಿನ ತೋರಣ ಕಟ್ಟಬೇಕು.

ಸ್ಮಿತಾ:ಅಮ್ಮಾ, ಯಾಕೆ ಮಾವಿನ ತೋರಣ ಕಟ್ಟುತ್ತಿರೋದು? ಏನು ವಿಶೇಷವಿದೆ?

**ಅಮ್ಮ:** ಬರುವ ಸೋಮವಾರ ಯುಗಾದಿ ಹಬ್ಬವಿದೆ ಅಲ್ವಾ ಪುಟ್ಟಾ?

ಸ್ಮಿತಾ: ಓ, ಹೌದಲ್ವಾ. ಅಮ್ಮಾ 'ಹಬ್ಬ' ಎಂದರೇನು?

**ಅಮ್ಮ:** ಹಬ್ಬ ಎಂದರೆ, "ಒಂದು ಗೊತ್ತುಪಡಿಸಿದ ಶುಭದಿನದಂದು ಬೇರೆಬೇರೆ ಧರ್ಮದವರು ತಮ್ಮದೇ ಆದ ವಿಧಾನದಲ್ಲಿ ದೇವರಿಗೆ ಪೂಜೆ, ಪ್ರಾರ್ಥನೆಯನ್ನು ಸಲ್ಲಿಸಿ ವಿಶೇಷ ಅಡುಗೆಯೊಂದಿಗೆ ಸಂಭ್ರಮಿಸುವುದೇ ಹಬ್ಬ. ಉದಾಹರಣೆಗೆ: ದೀಪಾವಳಿ, ಯುಗಾದಿ ಕ್ರಿಸ್‌ಮಸ್, ರಂಜಾನ್, ಬುದ್ಧಪೂರ್ಣಿಮಾ, ಮಹಾವೀರಜಯಂತಿ, ಗುರುನಾನಕ್‌ಜಯಂತಿ ಇತ್ಯಾದಿ.

ಸ್ಮಿತಾ : ಎಲ್ಲರೂ ಎಲ್ಲಾ ಹಬ್ಬಗಳನ್ನು ಆಚರಿಸುತ್ತಾರಾ ?

**ಅಮ್ಮ:** ಇಲ್ಲ, ಒಂದು ಸಮುದಾಯದಲ್ಲಿ ಬೇರೆಬೇರೆ ಧರ್ಮದವರೆಲ್ಲಾ ಒಟ್ಟಾಗಿ ವಾಸಿಸುತ್ತಿರುತ್ತೇವೆ. ನಮ್ಮೊಳಗಿನ ರೀತಿ ನೀತಿಗಳು ಬದಲಾಗಿರುತ್ತವೆ. ಅದರಂತೆ ನಮ್ಮ ಆಚರಣೆ ಸಹ ಬೇರೆಬೇರೆಯಾಗಿರುತ್ತದೆ. ಹಿಂದೂಗಳು ದೀಪಾವಳಿ ಯುಗಾದಿ ಮುಂತಾದವುಗಳನ್ನು ಆಚರಿಸಿದರೆ, ಮುಸ್ಲಿಮರು ರಂಜಾನ್, ಕ್ರೈಸ್ತರು ಕ್ರಿಸ್ಮಸ್ ಹೀಗೆ ಅವರವರ ಹಬ್ಬಗಳನ್ನು ಆಚರಿಸುತ್ತಾರೆ.

ಸ್ಮಿತ: ಅಮ್ಮ, ಹಬ್ಬದ ದಿನ ಎಲ್ಲರೂ ಏನೇನು ತಿನಿಸುಗಳನ್ನು ಮಾಡುತ್ತಾರೆ ?

**ಅಮ್ಮ:** ಕೆಲವರು ಒಬ್ಬಟ್ಟು, ಶೆಂಗಾಹೋಳಿಗೆ, ಪಾಯಸ ಮಾಡಿದ್ರೆ ಇನ್ನು ಕೆಲವರು ಬಿರಿಯಾನಿ ಮಾಡ್ತಾರೆ ಮತ್ತೆ ಕೆಲವರು ಕುಕ್ಕೀಸ್, ಜಾಮೂನ್, ಕೇಕ್ ಮಾಡ್ತಾರೆ.

ಸ್ಮಿತ: ದಸರಾ ಹಬ್ಬದ ಬಗ್ಗೆನೂ ಹೇಳಮ್ಮ.

**ಅಮ್ಮ:** ಹಾಂ! ದಸರಾ ನಮ್ಮ ನಾಡ ಹಬ್ಬ. ಅದು 9 ದಿನ ನಡೆಯುವುದರಿಂದ ನವರಾತ್ರಿ ಎನ್ನುತ್ತಾರೆ. ಹತ್ತನೇ ದಿನ ವಿಜಯದಶಮಿ. ಮೈಸೂರಿನಲ್ಲಿ ಜಂಬೂಸವಾರಿ ಇರುತ್ತದೆ. ನವರಾತ್ರಿಯನ್ನು ನಾಡಿನ ಮನೆಮನೆಗಳಲ್ಲೂ, ದೇವಾಲಯಗಳಲ್ಲೂ ಆಚರಿಸುತ್ತಾರೆ.

DIET CHIKKAMAGALURU

ಸ್ಮಿತ: ಶಾಲೆಯಲ್ಲೂ ಹಬ್ಬವನ್ನು ಆಚರಿಸುತ್ತೇವಾ?

ಅಮ್ಮ: ಹೌದು. ಶಾಲೆಗಳಲ್ಲಿ ರಾಷ್ಟ್ರೀಯ ಹಬ್ಬಗಳಾದ ಗಾಂಧಿಜಯಂತಿ, ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ ಮುಂತಾದವುಗಳನ್ನು ಆಚರಿಸಲಾಗುತ್ತದೆ.

ಸ್ಮಿತ: ಅಮ್ಮ, ನನ್ನ ಗೆಳತಿ ರಮ್ಯ ಮೊನ್ನೆ ಜಾತ್ರೆಗೆ ಹೋಗಿದ್ದೆಅಂತ ಹೇಳಿದ್ಲು. ಜಾತ್ರೆ ಎಂದರೇನು? ನಮ್ಮ ಮನೆಯಲ್ಲೂ ಜಾತ್ರೆ ಮಾಡ್ತೇವಾ?

**ಅಮ್ಮ:** ಜಾತ್ರೆ ಯಾರೋ ಒಬ್ಬರು ನಡೆಸುವಂತದಲ್ಲಾ. ಇದು ಊರೊಟ್ಟಿನ ಕೆಲಸ. ಎಲ್ಲರ ಸಹಕಾರ ಬೇಕು. ಜಾತ್ರೆಗೆ ಸುತ್ತಲ ಊರಿನವರು ದೂರದ ಊರುಗಳಿಂದ ಬರುವವರು ಇರ್ತಾರೆ. ಬಂದು ಹೋಗುವವರಿಗೆ ಸಾರಿಗೆ ವ್ಯವಸ್ಥೆ, ಜನರ ನಿಯಂತ್ರಣಕ್ಕೆ ಪೊಲೀಸ್ ವ್ಯವಸ್ಥೆ ಇರುತ್ತದೆ. ಉರೂಸ್ ಕೂಡಾ ಒಂದು ಉತ್ಸವವೆ ಆಗಿದೆ. ಉದಾಹರಣೆಗೆ: ಎಲ್ಲಮ್ಮನ ಜಾತ್ರೆ, ಮಾರಿಕಾಂಬಾ ಜಾತ್ರೆ, ಗವಿಗಂಗಾದರೇಶ್ವರ ಜಾತ್ರೆ, ಕರಗ, ಕಡಲೆಕಾಯಿ ಪರಿಷೆ ಇವೆಲ್ಲಾ ಜಾತ್ರೆಗಳು. ಖ್ವಾಜಾ ಬಂದೇ ನವಾಜ್ ಇದು ಗುಲ್ಬರ್ಗಾದಲ್ಲಿನ ಪ್ರಸಿದ್ಧವಾದ ಉರೂಸ್ ಆಗಿದೆ.

ಸ್ಮಿತ: ಅಮ್ಮ, ಮದುವೆ, ನಾಮಕರಣ ಇವೆಲ್ಲಾ ಏನು?

**ಅಮ್ಮ:** ಮನೆ ಅಥವಾ ನೆರೆಮನೆಯವರು, ಬಂಧುಗಳು ಪರಸ್ಪರ ಸಹಕಾರದೊಂದಿಗೆ ಸೇರಿ ನಡೆಸುವ ಚಟುವಟಿಕೆಯನ್ನು ಸಮಾರಂಭ ಎಂದು ಕರೆಯುತ್ತಾರೆ. ಉದಾಹರಣೆಗೆ: ಮದುವೆ, ನಾಮಕರಣ, ಗೃಹಪ್ರವೇಶ, ವಾರ್ಷಿಕೋತ್ಸವ ಇವುಗಳು ಸಮಾರಂಭಗಳಾಗಿವೆ.









ಸ್ಮಿತ: ಹಬ್ಬ–ಜಾತ್ರೆ– ಸಮಾರಂಭದಲ್ಲಿ ಎಷ್ಟೊಂದು ವ್ಯತ್ಯಾಸವಿದೆ ಅಲ್ವಾ ಅಮ್ಮ.

**ಅಮ್ಮ:** ಹೌದು, ಈಗ ನೀನು ಬೇಗನೆ ತಿಂಡಿ ತಿಂದು ನೀನು ಭಾಗವಹಿಸಿದ ಹಬ್ಬ, ಜಾತ್ರೆ ಸಮಾರಂಭಗಳ ಬಗ್ಗೆ ನಿನಗೇನು ಗೊತ್ತಿದೆಯೋ ಅದನ್ನು ಬರೀಬೇಕು.

ಸ್ಮಿತ: ಸರಿಯಮ್ಮ.

****************************************************************************************************

DIET CHIKKAMAGALURU

| ಪರಿಸರ ಅಧ್ಯಯನ | ಮೈಲಿಗಲ್ಲು-2<br>ಹಬ್ಬ-ಜಾತ್ರೆ-ಸಮಾರಂಭ (ಅಭ್ಯಾಸ) | 3ನೇ ತರಗತಿ<br>2/5 |
|---|---|---|

## ಪಟ್ಟಿ ಮಾಡಿರಿ (ಅಭ್ಯಾಸ)

**ಸೂಚನೆಗಳು:**

**ಈ ಕೆಳಗೆ ನೀಡಿರುವ ಹಬ್ಬ, ಜಾತ್ರೆ ಸಮಾರಂಭಗಳ ಹೆಸರುಗಳನ್ನು ವಿಂಗಡಿಸಿ, ಆಯಾ ಕೋಷ್ಟಕದಲ್ಲಿ ಬರೆಯಲು ತಿಳಿಸಿ. ನಂತರ ಈ ಹಾಳೆಯನ್ನು ಮೌಲ್ಯಮಾಪನಕ್ಕಾಗಿ ಶಿಕ್ಷಕರಿಗೆ ನೀಡಿರಿ.**

(ದೀಪಾವಳಿ, ಮದುವೆ, ರಂಜಾನ್, ಗಣೇಶಚತುರ್ಥಿ, ಕಡಲೆಕಾಯಿ ಪರಿಷೆ, ಯುಗಾದಿ, ಎಲ್ಲಮ್ಮನ ಜಾತ್ರೆ, ಕ್ರಿಸ್‌ಮಸ್, ನಾಮಕರಣ, ಮಾರಿಕಾಂಬ ಜಾತ್ರೆ, ದಸರ, ಖ್ವಾಜಾ ಬಂದೇ ನವಾಜ್ ಉರುಸ್, ಸಂಕ್ರಾಂತಿ, ವಾರ್ಷಿಕೋತ್ಸವ, ಬುದ್ಧ ಪೂರ್ಣಿಮಾ, ಗುರುನಾನಕ್ ಜಯಂತಿ, ಗವಿಗಂಗಾಧರೇಶ್ವರ ಜಾತ್ರೆ )

| ಹಬ್ಬ | ಜಾತ್ರೆ | ಸಮಾರಂಭ |
|---|---|---|
| | | |
| | | |
| | | |
| | | |
| | | |
| | | |
| | | |

DIET CHIKKAMAGALURU

| | | |
|---|---|---|
| ಪರಿಸರ ಅಧ್ಯಯನ | ಮೈಲಿಗಲ್ಲು 2<br>ಹಬ್ಬ– ಜಾತ್ರೆ– ಸಮಾರಂಭ | 3ನೇ ತರಗತಿ<br>3/5 |

**ಪದಬಂಧ (ಬಳಕೆ))**

**ಮಾರ್ಗದರ್ಶಕರಿಗೆ ಸೂಚನೆಗಳು**: ಈ ಕೆಳಗಿನ ಕೋಷ್ಟಕದಲ್ಲಿ ಅಡಗಿರುವ ಹಬ್ಬಗಳು ಮತ್ತು ಸಮಾರಂಭಗಳಿಗೆ ಸಂಬಂಧಿಸಿದ ಪದಗಳನ್ನು ಹುಡುಕಿಸಿ ಗುರುತಿಸಲು ತಿಳಿಸಿ, ಮತ್ತು ಕೆಳಗೆ ಕೊಟ್ಟಿರುವ ಜಾಗದಲ್ಲಿ ಬರೆಸಿದ ನಂತರ ಈ ಹಾಳೆಯನ್ನು ಶಿಕ್ಷಕರಿಗೆ ಮೌಲ್ಯಮಾಪನಕ್ಕಾಗಿ ನೀಡಿರಿ.

| | | | | | | | |
|---|---|---|---|---|---|---|---|
| ಯು | ಗಾ | ದಿ | ಸ | ರಂ | ಜಾ | ನ್ | ದೀ |
| ಕ | ರ | ಗ | ಹು | ಟ್ಟು | ಹ | ಬ್ಬ | ಪಾ |
| ಮ | ಈ | ನಾ | ಕ್ರಿ | ಸ್ | ಮ | ಸ್ | ವ |
| ಟ | ದ್ | ಮ | ಜಾ | ತ್ರೆ | ದು | ಗ | ಳಿ |
| ಸಂ | ಮಿ | ಕ | ಮೊ | ಕ | ವೆ | ರ | ಪ |
| ಕ್ರಾಂ | ಲಾ | ರ | ಹ | ನ | ವ | ರಾ | ತ್ರಿ |
| ತಿ | ದ್ | ಣ | ರಂ | ಗು | ಡ್ | ಫ್ರೈ | ಡೇ |
| ಗ | ಣೇ | ಶ | ಚ | ತು | ರ್ಥಿ | ಹ | ಬ್ಬ |

**ಹಬ್ಬಗಳು ಸಮಾರಂಭಗಳು:**

1. ---------------- 1. -------------
2. ---------------- 2. -------------
3. ----------------- 3. --------------
4. ----------------- 4. --------------
5. ----------------- 5. -------------

DIET CHIKKABALLAPURA (watermark)

## ಚಿತ್ರಗಳಿಗೆ ಗೆರೆ ಎಳೆದು ಹೊಂದಿಸಿರಿ

**ಮಾರ್ಗದರ್ಶಕರಿಗೆ ಸೂಚನೆಗಳು:** ಈ ಕೆಳಗೆ ನೀಡಿರುವ ಚಿತ್ರಗಳಿಗೆ ಸಂಬಂಧಿಸಿದ ಹಬ್ಬಗಳನ್ನು ಹೊಂದಿಸಲು ತಿಳಿಸಿರಿ ಮತ್ತು ಈ ಹಾಳೆಯನ್ನು ಶಿಕ್ಷಕರಿಗೆ ಮೌಲ್ಯಮಾಪನಕ್ಕಾಗಿ ನೀಡಿರಿ.

1. 
2. 
3. 
4. 
5. 


1. ಸ್ವಾತಂತ್ರ್ಯ ದಿನಾಚರಣೆ
2. ಮಹಾವೀರ ಜಯಂತಿ
3. ದೀಪಾವಳಿ
4. ಕ್ರಿಸ್‌ಮಸ್
5. ನವರಾತ್ರಿ

DIET CHIKKAMAGALURU

6. 

6. ರಂಜಾನ್

| ಪರಿಸರ ಅಧ್ಯಯನ | ಮೈಲಿಗಲ್ಲು 2<br>ಹಬ್ಬ–ಜಾತ್ರೆ–ಸಮಾರಂಭ ( ಮೌ.ಮಾ) | 3ನೇ ತರಗತಿ<br>5/5 |
|---|---|---|

## ಪ್ರಶ್ನಾವಳಿ ( ಮೌಲ್ಯಮಾಪನ)

**ಮಾರ್ಗದರ್ಶಕರಿಗೆ ಸೂಚನೆಗಳು:** ಈ ಕೆಳಗಿನ ಪ್ರಶ್ನೆಗಳಿಗೆ ಮಕ್ಕಳಿಂದ ಮೌಖಿಕವಾಗಿ ಉತ್ತರವನ್ನು ಪಡೆದು ನಂತರ ಇದೇ ಹಾಳೆಯಲ್ಲಿ ಉತ್ತರವನ್ನು ಬರೆಸಿ ಈ ಹಾಳೆಯನ್ನು ಶಿಕ್ಷಕರಿಗೆ ಮೌಲ್ಯಮಾಪನಕ್ಕಾಗಿ ನೀಡಿರಿ.

**ಪ್ರಶ್ನೆಗಳು:**

1. ಹಬ್ಬ ಎಂದರೇನು?
2. ನಿನ್ನ ಮನೆಯಲ್ಲಿ ಆಚರಿಸುವ ಹಬ್ಬಗಳು ಯಾವುವು?
3. ಹಬ್ಬದ ದಿನ ಮನೆಯವರಿಗೆ ನೀನು ಹೇಗೆ ಸಹಕರಿಸುವೆ?
4. ನಮ್ಮ ನಾಡ ಹಬ್ಬ ಯಾವುದು?
5. ರಾಷ್ಟ್ರೀಯ ಹಬ್ಬಗಳನ್ನು ಹೆಸರಿಸು.
6. ನೀನು ಭಾಗವಹಿಸಿರುವ ಜಾತ್ರೆಗಳನ್ನು ಹೆಸರಿಸು.
7. ಜಾತ್ರೆಗಳಲ್ಲಿ ನೀನು ಏನೇನನ್ನು ನೋಡಿರುವೆ?
8. ಹಬ್ಬದ ದಿನ ಯಾವ ಯಾವ ತಿಂಡಿ ತಿನಿಸುಗಳನ್ನು ಮಾಡುತ್ತಾರೆ?
9. ನೀನು ಭಾಗವಹಿಸಿರುವ ಸಮಾರಂಭಗಳು ಯಾವುವು?

DIET CHIKKAMAGALURU

10. ಸಮಾರಂಭಗಳಲ್ಲಿ ಯಾರು ಯಾರು ಭಾಗವಹಿಸುತ್ತಾರೆ?

| ಪರಿಸರ ಅಧ್ಯಯನ | ಪಾಠ–3 (ಮೈಲಿಗಲ್ಲು–3)<br>ವಸತಿ (ಕಲಿಕಾಂಶ) | 3ನೆಯ ತರಗತಿ<br>1/4 |
|---|---|---|

DIET CHIKKAMAGALURU

**ಕಲಿಕಾ ಫಲಗಳು:**

1. ಮನೆಯ ಅಗತ್ಯತೆಯನ್ನು ವಿವರಿಸುವುದು.
2. ಮನೆ ಕಟ್ಟಲು ಬೇಕಾಗುವ ವಸ್ತುಗಳನ್ನು ಪಟ್ಟಿ ಮಾಡುವುದು.
3. ಉತ್ತಮ ಮನೆಯ ಲಕ್ಷಣಗಳನ್ನು ಹೆಸರಿಸುವುದು.
4. ಮನೆಯ ಅಲಂಕಾರಿಕ ವಿಧಾನಗಳನ್ನು ಅರ್ಥೈಸಿಕೊಳ್ಳುವುದು.
5. ಮನೆಯಲ್ಲಿ ಉಂಟಾಗುವ ವಿವಿಧ ರೀತಿಯ ಕಸಗಳನ್ನು ಗುರುತಿಸುವುದು. ಇದರ ಸರಿಯಾದ ವಿಲೇವಾರಿ ಕ್ರಮವನ್ನು ಅರಿಯುವುದು ಮತ್ತು ಅನುಸರಿಸುವುದು.

**ಸೂಚನೆಗಳು:**

- ಇಲ್ಲಿರುವ ಕಲಿಕಾಂಶವನ್ನು ಒಂದೆರೆಡು ಬಾರಿ ಓದಿ ಅರ್ಥೈಸಿಕೊಂಡು, ಮಕ್ಕಳಿಗೆ ಹೇಳುವುದು.
- ಕಲಿಕಾಂಶ ಅರ್ಥೈಸುವ ಸಂದರ್ಭದಲ್ಲಿ ಆಗಾಗ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುತ್ತ ಈ ಕಲಿಕಾಂಶಕ್ಕೆ ಸಂಬಂಧಿಸಿದಂತೆ ಅವರಲ್ಲಿ ಕುತೂಹಲ ಕೆರಳಿಸುವುದು.
- ಅವರ ಮನದಲ್ಲಿ ಮೂಡಿದ ಪ್ರಶ್ನೆ/ಸಮಸ್ಯೆಗಳಿಗೆ ಉತ್ತರಿಸುವುದು.
- ಮಾರ್ಗದರ್ಶನಕ್ಕಾಗಿ ಶಾಲಾ ಶಿಕ್ಷಕರನ್ನು ಸಂಪರ್ಕಿಸುವುದು.

## ಮನೆ

ನಮಗೆ ವಾಸಿಸಲು ಮನೆ ಬಹು ಮುಖ್ಯ ಅವಶ್ಯಕತೆಗಳಲ್ಲಿ ಒಂದು ಎಂಬುದನ್ನು ಈಗಾಗಲೇ ತಿಳಿದುಕೊಂಡಿದ್ದೇವೆ. ಮನೆ ನಮ್ಮನ್ನು ಗಾಳಿ, ಮಳೆ, ಬಿಸಿಲು ಚಳಿಗಳಿಂದ ರಕ್ಷಿಸುತ್ತದೆ. ಬಹಳ ಹಿಂದೆ ಮಣ್ಣಿನ, ಹುಲ್ಲಿನ ಮನೆಗಳನ್ನು ಕಟ್ಟುತ್ತಿದ್ದರು. ಸಿಮೆಂಟ್ ಕಂಡುಹಿಡಿದ ನಂತರ ಮನೆಗಳಲ್ಲಿ ವಿವಿಧತೆಯನ್ನು ಕಾಣುತ್ತೇವೆ.







**ಮನೆಯ ಪ್ರಕಾರಗಳು:**

1. **ಕಚ್ಚಾಮನೆ:** ಹುಲ್ಲು ಅಥವಾ ತಗಡಿನ ಶೀಟಿನ ಮೇಲ್ಛಾವಣಿಗಳನ್ನು ಹೊಂದಿರುವ ಮನೆಗಳು ಕಚ್ಚಾ ಮನೆಗಳು.
   ಉದಾ: ಗುಡಿಸಲು, ಟೆಂಟ್ ಮನೆಗಳು.
2. **ಪಕ್ಕಾ ಮನೆ:** ಸುಟ್ಟಇಟ್ಟಿಗೆ, ಕಲ್ಲು, ಸಿಮೆಂಟಿನ ಗೋಡೆ ಇದ್ದು ಹೆಂಚು/ಸಿಮೆಂಟಿನ ಮೇಲ್ಛಾವಣಿ ಹೊಂದಿರುವ ಮನೆಗಳನ್ನು ಪಕ್ಕಾ ಮನೆಗಳು. ಉದಾ: ತಾರಸಿ ಮನೆ, ಮಹಡಿ ಮನೆ, ಹೆಂಚಿನ ಮನೆ

**ಮನೆ ನಿರ್ಮಾಣ ಸಾಮಗ್ರಿಗಳು:**

ಮನೆಗಳನ್ನು ಕಟ್ಟುವಾಗ ಕಲ್ಲು, ಇಟ್ಟಿಗೆ, ಮರಳು, ಹೆಂಚು, ಸಿಮೆಂಟು, ಮರ, ತಗಡು, ಕಬ್ಬಿಣ, ಗಾಜು ಹಾಗೂ ಕಿಟಕಿ, ಬಾಗಿಲು ಸಿದ್ಧಪಡಿಸಲು ಮರ, ಕಬ್ಬಿಣ, ಗಾಜು, ಫೈಬರ್‌ಗಳನ್ನು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ಬಳಸುತ್ತಾರೆ.

**ಪರಿಸರ/ ವಾತಾವರಣಕ್ಕೆ ತಕ್ಕಂತೆ ಮನೆಗಳು.**

ಹಿಮ ಪ್ರದೇಶಗಳಲ್ಲಿ ಹೆಚ್ಚು ಹಿಮ ಬೀಳುವುದರಿಂದ ಅಲ್ಲಿನ ಜನರು ಹಿಮದ ಮಂಜುಗಡ್ಡೆಗಳನ್ನು ಇಟ್ಟಿಗೆಯಂತೆ ಕೊರೆದು ಮನೆ ಕಟ್ಟುತ್ತಾರೆ. ಇದನ್ನು 'ಇಗ್ಲೂ' ಎನ್ನುತ್ತಾರೆ. ಹೆಚ್ಚು ಭೂಕಂಪವಾಗುವ ಪ್ರದೇಶಗಳಲ್ಲಿ ಅತ್ಯಂತ ಹಗುರವಾದ ರಟ್ಟು, ಶೀಟು, ಇತ್ಯಾದಿಗಳನ್ನು ಬಳಸಿ ಮನೆ ರಚಿಸುತ್ತಾರೆ. ಊರಿಂದೂರಿಗೆ ಸಂಚರಿಸುವ ಜನರು ಪ್ಲಾಸ್ಟಿಕ್, ಬಟ್ಟೆಗಳ ಟೆಂಟ್‌ಗಳನ್ನು ರಚಿಸುತ್ತಾರೆ. ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲಿ ಮೇಲ್ಛಾವಣಿಯನ್ನು ಇಳಿಜಾರಾಗಿ ರಚಿಸಿರುತ್ತಾರೆ. ಸಮುದ್ರದ ಬದಿಗಳಲ್ಲಿ ಮರದಿಂದ ಮಾಡಿದ ಮನೆ, ಹಾಗೂ ಮರದ ಮೇಲೂ ಮನೆಗಳನ್ನು ರಚಿಸುತ್ತಾರೆ.

DIET CHIKKAMAGALURU

## ಮನೆಯ ಸ್ವಚ್ಚತೆ:

ನಾವು ಯಾವುದೇ ಮನೆಯಲ್ಲಿ ವಾಸವಿದ್ದರೂ ಅದು ನಮಗೆ ಮುದ್ದಿನ ಮನೆಯಾಗಿರುತ್ತದೆ. ಈ ಮನೆಗಳನ್ನು ನಾವು ಸ್ವಚ್ಛವಾಗಿರುವಂತೆ ನೋಡಿಕೊಳ್ಳಬೇಕಾದುದು ನಮ್ಮ ಆದ್ಯ ಕರ್ತವ್ಯ. ಮನೆಯಲ್ಲಿ ವಿಶಾಲವಾದ ಕಿಟಕಿ, ಬಾಗಿಲುಗಳಿದ್ದು ಗಾಳಿ, ಬೆಳಕು ಬರುವಂತಿರಬೇಕು. ಮನೆಗೆ ಅಂಟಿಕೊಂಡಂತೆ ಕಸದ ತೊಟ್ಟಿಗಳನ್ನು ಇಡಬಾರದು. ಮನೆಯ ಸುತ್ತ ಹೂವಿನ ಹಾಗೂ ಇತರೆ ಮರಗಿಡಗಳಿರಬೇಕು. ನೀರು ಸರಾಗವಾಗಿ ಹರಿದು ಹೋಗಲು ಕಾಲುವೆ ವ್ಯವಸ್ಥೆ ಇರಬೇಕು. ಮನೆಯನ್ನು ನಾವು ಪ್ರತಿದಿನ ಕಸಗುಡಿಸಿ ರಂಗವಲ್ಲಿಗಳನ್ನು ಇಟ್ಟು ಶೃಂಗರಿಸುತ್ತಿರಬೇಕು.

ಮನೆಗಳು ಮನುಷ್ಯನ ಪ್ರತಿಷ್ಠೆಯ ಸಂಕೇತವಾಗಿದೆ.



## ಕಸ

ನಮಗೆ ಬೇಡವಾದ ವಸ್ತುಗಳನ್ನು ಕಸ ಎನ್ನುತ್ತೇವೆ. ಈ ಕಸದರೂಪದ ವಸ್ತುಗಳನ್ನು ಪ್ರತಿದಿನ ಎಲ್ಲೆಂದರಲ್ಲಿ ನಾವು ಬಿಸಾಡುತ್ತೇವೆ. ಚಾಕಲೇಟು ಸಿಪ್ಪೆ, ತರಕಾರಿ ಸಿಪ್ಪೆ, ಒಡೆದ ಪ್ಲಾಸ್ಟಿಕ್, ಹಾಳಾದ ಬಲ್ಬ್ ಇತ್ಯಾದಿಗಳನ್ನು ಎಲ್ಲೆಂದರಲ್ಲಿ ಬಿಸಾಡಿ ಪರಿಸರದ ತುಂಬ ಕಸವನ್ನು ಹೆಚ್ಚಿಸುತ್ತಿದ್ದೇವೆ. ಹೀಗೆ ಮಾಡಿದರೆ ಪರಿಸರ ಮಲಿನವಾಗಿ ನಮ್ಮ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಆದ್ದರಿಂದ ನಾವು ಕಸವನ್ನುಎಲ್ಲೆಂದರಲ್ಲಿ ಬಿಸಾಡದೆ ಕಸದಡಬ್ಬಿಯಲ್ಲಿಯೇ ಹಾಕುವ ಮತ್ತು ಅದನ್ನು ಸರಿಯಾದ ಕ್ರಮದಲ್ಲಿ ವಿಲೇವಾರಿ ಮಾಡಬೇಕು. ನಮ್ಮ ಮನೆಯಲ್ಲಿ ಮೂರುರೀತಿಯ ಕಸಗಳು ಉತ್ಪತ್ತಿಯಾಗುತ್ತವೆ. ಅವು ಕೊಳೆಯುವ ಕಸ, ಪುನರ್ ಬಳಕೆಯ ಕಸ ಮತ್ತು ಅಪಾಯಕಾರಿ ಕಸಗಳು.

**ಕೊಳೆಯುವ ಕಸ**: ತರಕಾರಿ ಸಿಪ್ಪೆ, ಹಣ್ಣಿನ ಸಿಪ್ಪೆ, ಹಳಸಿದ ಆಹಾರ ಪದಾರ್ಥಗಳು ಕೊಳೆಯುವ ಕಸಗಳು. ಇವುಗಳನ್ನು ಒಂದಡೆ ಹಾಕಿದರೆ ಕೊಳೆತು ಗೊಬ್ಬರವಾಗಿ ಸಸ್ಯಗಳ ಬೆಳವಣಿಗೆಗೆ ಪೂರಕವಾಗುತ್ತದೆ.

**ಪುನರ್ ಬಳಕೆಯ ಕಸ**: ಕಾಗದದಚೂರು, ಪ್ಲಾಸ್ಟಿಕ್ ಸಾಮಗ್ರಿಗಳು, ಕಬ್ಬಿಣ, ಹರಿದ ಬಟ್ಟೆ, ರಬ್ಬರ್ ಇವುಗಳನ್ನು ಪುನಃ ಕರಗಿಸಿ ಅಥವಾ ಹೊಸ ವಸ್ತುವಾಗಿ ರೂಪಿಸಲು ಸಾಧ್ಯವಾಗುತ್ತದೆ.

**ಅಪಾಯಕಾರಿ ಕಸ**: ಬ್ಲೇಡ್, ಅವಧಿ ಮೀರಿದ ಔಷಧಿ, ಕೀಟನಾಶಕ, ಬಣ್ಣ, ಒಡೆದ ಬಲ್ಬ್‌ಗಳು, ಆಸ್ಪತ್ರೆಗಳಲ್ಲಿ ಬಳಸಿ ಬಿಸಾಡಿದ ಡ್ರಿಪ್ ಬಾಟಲ್/ಪೈಪ್‌ಗಳು ಮತ್ತು ಸಿರಿಂಜ್‌ಗಳು ಇವು ಅಪಾಯಕಾರಿ ಕಸಗಳು



ಇವುಗಳನ್ನು ನಾವು ಪ್ರತ್ಯೇಕವಾಗಿ ಸಂಗ್ರಹಿಸಬೇಕು. ಈಗ ನಮ್ಮ ದೇಶದಲ್ಲಿ ಸ್ವಚ್ಛ ಭಾರತ ಅಭಿಯಾನ ಕಾರ್ಯಕ್ರಮ ಜಾರಿಯಲ್ಲಿರುವುದರಿಂದ ಮೂರೂ ರೀತಿಯ ಕಸಗಳನ್ನು ವಿಲೇವಾರಿ ಮಾಡಲು ಅಗತ್ಯಕ್ರಮ ಕೈಗೊಳ್ಳಲಾಗುತ್ತಿದೆ.ಮನೆಯಲ್ಲಿ ನಾವೆಲ್ಲರೂ ಕಸದ ಪರಿಣಾಮವನ್ನು

ಅರಿತು ಸರಿಯಾದ ರೀತಿಯಲ್ಲಿ ವಿಲೇವಾರಿ ಮಾಡಿದರೆ ನಮ್ಮ ಮನೆಯು ಸುಂದರ ಮತ್ತು ಸ್ವಚ್ಛ ಮನೆಯಾಗಿರುತ್ತದೆ. ಅದಕ್ಕಾಗಿ ನಾವು ನಮ್ಮ ಮನೆಗಳಲ್ಲಿರುವ ಕಸವನ್ನು ಸರಿಯಾದ ಕ್ರಮದಲ್ಲಿ ವಿಂಗಡಿಸಿ ವಿಲೇವಾರಿ ಮಾಡುವ ಸಂಕಲ್ಪ ಮಾಡೋಣ.

DIET CHIKKAMAGALURU

| ಪರಿಸರ ಅಧ್ಯಯನ | ಪಾಠ–3 (ಮೈಲಿಗಲ್ಲು–3)<br>ವಸತಿ ಮತ್ತು ಸ್ವಚ್ಛತೆ (ಅ) | 3ನೆಯ ತರಗತಿ<br>2/4 |
|---|---|---|
| | ಪ್ರಶ್ನಾವಳಿ | |

**ಸೂಚನೆಗಳು:** ಈ ಕೆಳಗಿನ ಪ್ರಶ್ನೆಗಳಿಗೆ ಮಕ್ಕಳಿಂದ ಉತ್ತರವನ್ನು ಮೌಖಿಕವಾಗಿ ಪಡೆದು ನಂತರ ಇದೇ ಹಾಳೆಯಲ್ಲಿ ಬರೆಸಿ ಅದನ್ನು ಮೌಲ್ಯಮಾಪನಕ್ಕಾಗಿ ಶಿಕ್ಷಕರಿಗೆ ನೀಡಿರಿ.

**ಪ್ರಶ್ನೆಗಳಿಗೆ ಉತ್ತರಿಸಿರಿ:**

1. ಮನೆಗಳು ನಮಗೆ ಯಾಕೆ ಅಗತ್ಯವಾಗಿದೆ?
2. ಮನೆಗಳಲ್ಲಿ ಎಷ್ಟು ಪ್ರಕಾರಗಳಿವೆ? ಅವು ಯಾವುವು?
3. ನಿನ್ನ ಮನೆ ಯಾವ ಪ್ರಕಾರದ್ದು?
4. ಮನೆ ಕಟ್ಟಲು ಬಳಸುವ ಸಾಮಗ್ರಿಗಳು ಯಾವುವು?
5. ಇಗ್ಲೂ ಮನೆಯನ್ನು ನಿರ್ಮಿಸಲು ಬಳಸುವ ಸಾಮಗ್ರಿ ಯಾವುದು?
6. ಊರಿಂದೂರಿಗೆ ಹೋಗುವ ಜನ ಯಾವ ರೀತಿಯ ಮನೆಗಳನ್ನು ನಿರ್ಮಿಸುತ್ತಾರೆ?
7. ಒಂದು ಸುಂದರವಾದ ಮನೆ ಹೇಗಿರಬೇಕು?
8. ನಿನ್ನ ಮನೆಯನ್ನು ಸ್ವಚ್ಛವಾಗಿಟ್ಟುಕೊಳ್ಳಲು ನೀವೆಲ್ಲ ಏನು ಮಾಡುತ್ತೀರಿ?
9. ಕಸವನ್ನು ಹೇಗೆ ವಿಂಗಡಣೆ ಮಾಡಬೇಕು?
10. ಕಸದ ನಿರ್ವಹಣೆಯ ಬಗ್ಗೆ ನಮ್ಮ ಪ್ರತಿಜ್ಞೆ ಏನು?

DIET CHIKKAMAGALURU

| | ವಸತಿ ಮತ್ತು ಸ್ವಚ್ಛತೆ (ಮೌಲ್ಯಮಾಪನ) | 3/4 |
|---|---|---|

ಸೂಚನೆಗಳು:

ಅ. ಕೆಳ ಕಾಣಿಸಿದ ವೃತ್ತಗಳಲ್ಲಿ ಆಯಾ ಮನೆಗಳನ್ನು ನಿರ್ಮಿಸಲು ಬಳಸುವ ಸಾಮಗ್ರಿಗಳನ್ನು ಪಟ್ಟಿ ಮಾಡಿರಿ:

ಕಚ್ಚಾ ಮನೆ ನಿರ್ಮಾಣ ಸಾಮಗ್ರಿಗಳು

ಪಕ್ಕಾ ಮನೆ ನಿರ್ಮಾಣ ಸಾಮಗ್ರಿಗಳು

ಆ. ಇಲ್ಲಿರುವ ಮನೆ ಚಿತ್ರಗಳ ಕೆಳಗೆ ಇದುಯಾವ (ಹೆಂಚು, ತಗಡು, ಹುಲ್ಲು ಇತ್ಯಾದಿ) ಮನೆ ಎಂದು ಬರೆಯಿರಿ:













| ಪರಿಸರ ಅಧ್ಯಯನ | ಪಾಠ–3 (ಮೈಲಿಗಲ್ಲು–3)<br>ವಸತಿ ಮತ್ತು ಸ್ವಚ್ಛತೆ (ಮೌಲ್ಯಮಾಪನ) | 3ನೆಯ ತರಗತಿ<br>4/4 |
|---|---|---|

**ಸೂಚನೆಗಳು:** ಈ ಕೆಳಗಿನ ಕಸಗಳನ್ನು ವಿಂಗಡಿಸಿ ನೀಡಿರುವ ವೃತ್ತದಲ್ಲಿ ಬರೆಯಿರಿ.

(ತರಕಾರಿ ಸಿಪ್ಪೆ, ಬ್ಲೇಡು, ಹಳೆ ಪಾತ್ರೆ, ಸೊಪ್ಪಿನ ಬೇರು, ಹಣ್ಣಿನ ಸಿಪ್ಪೆ, ಪ್ಲಾಸ್ಟಿಕ್ ವಸ್ತುಗಳು, ಹಳೇ ಪೇಪರ್, ರಬ್ಬರ್, ಗಾಜಿನ ಚೂರು, ಸಿರೇಂಜ್, ಔಷಧಿ ಬಾಟಲಿ, ಹಾಲಿನ ಕವರ್, ಮುರಿದ ಸ್ಕೇಲ್, ಹಳೆಯ ದಿನ ಪತ್ರಿಕೆ, ಬಳೆ ಚೂರು, ಬ್ಯಾಟರಿ ಸೆಲ್, ಖಾಲಿ ಪೆನ್ನು, ತೆಂಗಿನ ಕಾಯಿ ಗೆರಟೆ, ಬಲ್ಬ್, ಬಾಡಿದ ಹೂವು)

ಕೊಳೆಯುವ ಕಸ

ಅಪಾಯಕಾರಿ ಕಸ

ಪುನರ್ಬಳಕೆ ಕಸ

| ಪರಿಸರ ಅಧ್ಯಯನ | ಪಾಠ–3 (ಮೈಲಿಗಲ್ಲು–4)<br>ಮಾನವನ ಅಗತ್ಯತೆಗಳು (ಕಲಿಕಾಂಶ) | 3ನೆಯ ತರಗತಿ<br>1/5 |
|---|---|---|

**ಕಲಿಕಾ ಫಲಗಳು:** 1. ಮನುಷ್ಯನ ಅಗತ್ಯ ವಸ್ತುಗಳನ್ನು ಗುರುತಿಸಿ ವರ್ಗೀಕರಿಸುವುದು.
2. ಹಿಂದಿನ ಹಾಗೂ ಇಂದಿನ ಕಾಲದ ವಸ್ತು/ ಧಾನ್ಯ ಸಂಗ್ರಹಣೆಯ ವಿಧಾನಗಳನ್ನು ಅರಿಯುವುದು ಮತ್ತು ಉತ್ತಮವಾದುದನ್ನು ನಿರ್ಧರಿಸುವುದು.
3. ಮಣ್ಣಿನಿಂದ ಮಾಡಬಹುದಾದ ಸಾಮಗ್ರಿಗಳನ್ನು ಅರಿಯುವರು ಮತ್ತು ಮಣ್ಣಿನ ಮಾದರಿಗಳನ್ನು ತಯಾರಿಸಲು ಆಸಕ್ತಿ ತೋರುವುದು.

- **ಮಾರ್ಗದರ್ಶಕರಿಗೆ ಸೂಚನೆಗಳು:** ಇಲ್ಲಿರುವ ಕಥಾರೂಪದ ಕಲಿಕಾಂಶವನ್ನು ಒಂದೆರೆಡು ಬಾರಿ ಓದಿ ಅರ್ಥೈಸಿಕೊಂಡು, ಮಕ್ಕಳಿಗೆ ಕಥೆಯನ್ನು ಹೇಳಬೇಕು.
- ನಿರೂಪಿಸುವ ಸಂದರ್ಭದಲ್ಲಿ ಆಗಾಗ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುತ್ತ ಈ ಕಲಿಕಾಂಶಕ್ಕೆ ಸಂಬಂಧಿಸಿದಂತೆ ಅವರಲ್ಲಿ ಕುತೂಹಲ ಕೆರಳಿಸಬೇಕು.
- ಅವರ ಮನದಲ್ಲಿ ಮೂಡಿದ ಪ್ರಶ್ನೆ ಸಮಸ್ಯೆಗಳಿಗೆ ಉತ್ತರಿಸಬೇಕು.
- ಮಾರ್ಗದರ್ಶನಕ್ಕಾಗಿ ಶಾಲಾ ಶಿಕ್ಷಕರನ್ನು ಸಂಪರ್ಕಿಸುವುದು.

# ಮಾನವನ ಅಗತ್ಯತೆಗಳು





ರವಿ ಚಿಕ್ಕ ಬಾಲಕ ಒಂದು ದಿನ ದಾರಿಯಲ್ಲಿ ನಡೆದು ಬರುತ್ತಿದ್ದ. ಪ್ರತಿದಿನದಂತೆ ಈ ದಿನವೂ ದಾರಿಯಲ್ಲಿ ಓಡಾಡುತ್ತಿದ್ದ ಸೋಮಿಯಜ್ಜಿ (ಬುದ್ಧಿಮಾಂದ್ಯ) ಅವನ ಕಣ್ಣಿಗೆ ಬಿದ್ದಳು. ಅವಳು ಹರಕು ಬಟ್ಟೆ ತೊಟ್ಟಿದ್ದಳು. ಕೈಯಲ್ಲಿ ಯಾರೋ ನೀಡಿರುವ ಒಂದು ದೋಸೆಯ ಚೂರನ್ನು ಹಿಡಿದು ತಿನ್ನುತ್ತಾ, ಏನೋ ಹೇಳುತ್ತಾ ಹೋಗುತ್ತಿರುವುದನ್ನು ನೋಡಿದನು. ಅವಳನ್ನು ನೋಡಿದ ರವಿಯ ಮನಸ್ಸಿನಲ್ಲಿ ಪಾಪ ಈ ಅಜ್ಜಿ! ಇವಳು ಎಲ್ಲಿ ಮಲಗುತ್ತಾಳೆ? ಇವಳಿಗೆ ಊಟ, ಬಟ್ಟೆ ಯಾರು ಕೊಡುತ್ತಾರೆ? ಎಂಬ ಪ್ರಶ್ನೆಗಳು ಕಾಡತೊಡಗಿತು.

ಮನೆಗೆ ಬಂದ ರವಿ 'ಅಮ್ಮ ನಾನೊಂದು ಪ್ರಶ್ನೆ ಕೇಳಲೆ?' ಎಂದ. ಆಗ ರವಿಯ ತಂಗಿ ಸುಮತಿಯೂ ಅಲ್ಲಿಗೆ ಬಂದಳು. 'ಏನು ಕೇಳು?' ಎಂದಳು ಅಮ್ಮ. 'ಅಮ್ಮ ಆ ಸೋಮಜ್ಜಿ ಇದ್ದಾಳಲ್ವಾ ನಾನು ನೋಡಿದಾಗೆಲ್ಲ ದಾರಿಯಲ್ಲಿ ನಡೆದುಕೊಂಡು ಏನೇನೊ ಹೇಳಿಕೊಂಡು ಓಡಾಡುತ್ತಿರುತ್ತಾಳೆ. ಅವಳು ಎಲ್ಲಿ ಇರ್ತಾಳೆ? ಅವಳಿಗೆ ಊಟ ಬಟ್ಟೆ ಯಾರು ಕೊಡುತ್ತಾರೆ?' ಎಂದು ಕೇಳಿದ. ಆಗ ಅಮ್ಮ, ರವಿ ಮತ್ತು ಸುಮತಿಯನ್ನು ಪಕ್ಕದಲ್ಲಿ ಕೂರಿಸಿಕೊಂಡು ನೋಡಿ ಮಕ್ಕಳೆ, ಮನುಷ್ಯ ಬುದ್ಧಿವಂತ, ಬುದ್ಧಿಮಾಂದ್ಯ ಯಾವ ಸ್ಥಿತಿಯಲ್ಲಿಯೇ ಇದ್ದರೂ ಆತ ಬದುಕಲು ಊಟ, ಬಟ್ಟೆ ಮತ್ತು ಮನೆ ತೀರಾ ಅಗತ್ಯವಾಗಿದೆ ಇವಿಲ್ಲದೇಯಾರೂ ಸಹ ಬದುಕಲು ಸಾಧ್ಯವಿಲ್ಲ. ಆ ಸೋಮಜ್ಜಿ ಬಸ್‌ನಿಲ್ದಾಣ, ಅಂಗಡಿ ಮುಂಭಾಗ ಎಲ್ಲೋ ಒಂದು ಕಡೆ ಮಲಗುತ್ತಾಳೆ ಅದೇ ಅವಳ ಮನೆ. ಊಟ, ಬಟ್ಟೆ ಯಾರಾದರೂ ಕೊಡುತ್ತಾರೆ ನಾನು ಒಮ್ಮೊಮ್ಮೆ ಅವಳಿಗೆ ಊಟ ಮತ್ತು ಹಳೆಬಟ್ಟೆ ಕೊಡುತ್ತೇನೆ' ಎಂದಳು.

ಆಗ ಸುಮತಿ 'ಅಮ್ಮ ಅವಳ ಬಳಿ ಬಳೆ, ಸರ, ಟಿವಿ, ಮೊಬೈಲ್ ಏನೂ ಇಲ್ಲ, ಅವಿಲ್ಲದೇ ಅವಳು ಹೇಗಿರ್ತಾಳೆ? ನನಗಂತೂ ಅದು ಬೇಕೇ ಬೇಕಪ್ಪ' ಎಂದಳು. ಆಗ ಅಮ್ಮ 'ನೋಡು ಕಂದ 'ಮನುಷ್ಯ ಬದುಕಲಿಕ್ಕೆ ಆಗಲೇ ಹೇಳಿದಂತೆ ಊಟ, ಬಟ್ಟೆ, ಮನೆ ತೀರಾ ಅಗತ್ಯವಾಗಿದೆ. ಸೋಮಜ್ಜಿಗೆ ಅದು ಇರುವುದರಿಂದ ಇಲ್ಲಿಯವರೆಗೂ ಬದುಕಿದ್ದಾಳೆ. ಆದರೆ ಅವಳ ಬಳಿ ಸಂಪಾದನೆ (ಹಣ) ಮಾಡಲು ಸಾಧ್ಯವಾಗದೇ ಇರುವುದರಿಂದ ನಮ್ಮ ಹಾಗೇ ಸರ, ಬಳೆ ಟಿವಿ, ಮೊಬೈಲ್ ಅವಳ ಬಳಿ ಇಲ್ಲ. ನಿಮ್ಮ ತಂದೆ ಮತ್ತು ನಾನು ಇಬ್ಬರೂ ದುಡಿಯುವುದರಿಂದ ಒಳ್ಳೆಯ ಮನೆ ಒಳ್ಳೆಯ ಬಟ್ಟೆ ಹಾಗೂ ಊಟದ ಜೊತೆಗೆ ಇತರ ಅವಶ್ಯಕತೆಗಳನ್ನು ಪೂರೈಸಿಕೊಳ್ಳುತ್ತೇವೆ. ಹಾಗಾಗಿ ನಮ್ಮಲ್ಲಿ ಇವೆಲ್ಲವೂ ಇವೆ. ಆದರೂ ಇವು ಇಲ್ಲದೆಯೂ ನಾವು ಬದುಕಬಹುದು. ಆದರೆ ಊಟ, ಬಟ್ಟೆ, ಮನೆ ಇಲ್ಲದೇ ಬದುಕಲು ಸಾಧ್ಯವಿಲ್ಲ ಎಂದಳು. ಆಗ ರವಿ ಹೌದಮ್ಮ ನೀನು ಹೇಳುತ್ತಿರುವುದು ಸರಿ. ಊಟ, ಬಟ್ಟೆ, ಮನೆ ಇವು ನಮ್ಮ ತೀರ ಅಗತ್ಯ ವಸ್ತುಗಳು. ಉಳಿದವುಗಳು ಇಲ್ಲದಿದ್ದರೂ ನಾವು ಬದುಕಬಹುದು ಇದಕ್ಕೆ ಸೋಮಜ್ಜಿಯೇ ನಮಗೆ ಉದಾಹರಣೆ ಎಂದನು.

DIET CHIKKAMAGALURU

ಸುಮತಿ “ಅಮ್ಮ, ಮನುಷ್ಯ ಇವೆಲ್ಲವುಗಳು ಬೇಕು ಅನ್ನುವುದನ್ನು ಹೇಗೆ ತಿಳಿದುಕೊಂಡ? ಎಂದು ಆಶ್ಚರ್ಯಚಕಿತಳಾಗಿ ಕೇಳಿದಳು. ಆಗ ಅಮ್ಮ 'ನೋಡಿ ಮಕ್ಕಳೆ, ಬಹಳ ಹಿಂದೆ ಮನುಷ್ಯ ಪ್ರಾಣಿಗಳಂತೆ ಕಾಡಿನಲ್ಲಿ ವಾಸ ಮಾಡ್ತ ಇದ್ದ. ಆಗ ಸಹ ಅವನಿಗೆ ಊಟ, ಬಟ್ಟೆ, ಮನೆ ಬೇಕಾಗಿತ್ತು. ಅದಕ್ಕಾಗಿ ಆತ ಪ್ರಾಣಿಗಳನ್ನು ಬೇಟೆಯಾಡಿ ಗೆಡ್ಡೆ ಗೆಣಸುಗಳನ್ನು ಭೂಮಿಯಿಂದ ತೆಗೆದು ಊಟ ಮಾಡುತ್ತಿದ್ದ. ಬಟ್ಟೆಗಾಗಿ ಸಸ್ಯದ ಎಲೆ ಮತ್ತು ಕೊಂದ ಪ್ರಾಣಿಗಳ ಚರ್ಮವನ್ನು ಧರಿಸ್ತಾ ಇದ್ದ. ಇನ್ನು ಮನೆಗಾಗಿ ಮರದ ಪೊಟರೆ ಗುಹೆಗಳಲ್ಲಿ ವಾಸ ಮಾಡ್ತಾ ಇದ್ದ. ಆಗಲೂ ಸಹ ಅವನಿಗೆ ಅವು ತೀರಾ ಅಗತ್ಯವಾಗಿದ್ರಿಂದ ಪೂರೈಸಿಕೊಂಡ. ತುಂಬ ವರ್ಷಗಳ ನಂತರ ಅವನಿಗೆ ಬುದ್ಧಿ ಬೆಳೆಯುತ್ತಾ ಬಂದಿತು. ಆಗ ಆತ ಇತರ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಯೋಚನೆ ಮಾಡಿದ. ಪ್ರಾಣಿಗಳನ್ನು ಸುಲಭವಾಗಿ ಕೊಲ್ಲಲು ಆಯುಧಗಳನ್ನು ತಯಾರಿಸಿದ. ಊರಿಂದೂರಿಗೆ ಪ್ರಾಣಿಗಳ ಹಾಗೆ ತಿರುಗುವುದನ್ನು ಬಿಟ್ಟು ಒಂದೇ ಕಡೆ ವಾಸ ಮಾಡಿದ.







ಬೆಂಕಿ ಮತ್ತು ಚಕ್ರದ ಉಪಯೋಗಗಳನ್ನು ಕಂಡುಕೊಂಡ. ಆಹಾರದ ಬೆಳೆಗಳನ್ನು ಬೆಳೆಸಿದ. ಬೆಳೆದ ಧಾನ್ಯಗಳನ್ನು ಸಂಗ್ರಹಿಸಲು ಮತ್ತು ವಸ್ತುಗಳನ್ನು ಸಂಗ್ರಹಿಸಲು ಬೇರೆ ಬೇರೆ ವಿಧಾನಗಳನ್ನು ಬಳಸಿದ. (ಲಭ್ಯಆಹಾರ/ ವಸ್ತು ಸಂಗ್ರಹಣೆಯ ಚಿತ್ರಗಳನ್ನು ಮಕ್ಕಳಿಗೆ ತೋರಿಸುವುದು) ಮನೆಗಳನ್ನು ಕಟ್ಟಿಕೊಂಡ. ಮಣ್ಣಿನ ಉಪಯೋಗಗಳನ್ನು ಕಂಡುಕೊಂಡ. ಮಣ್ಣಿನಲ್ಲಿ ವಿವಿಧ ರೀತಿಯ ಮಾದರಿಗಳನ್ನು ಕಂಡುಕೊಂಡ. ಅವು ಯಾವ ಬೆಳೆಗೆ ಉತ್ತಮ ಎಂದು ತಿಳಿದುಕೊಂಡ. ಮತ್ತು ಮಣ್ಣಿನಿಂದ ಪಾತ್ರೆಗಳನ್ನು ಮಾಡುವುದನ್ನು ಕಲಿತ. ಮರದ ಉಪಯೋಗ ತಿಳಿದು ವಿವಿಧ ಗಾಡಿ, ಮನೆ ಬಳಕೆಗೆ ಸಾಮಗ್ರಿಗಳನ್ನು ಬಳಸಿದ' ಎಂದಳು.



ಅದಕ್ಕೆ ಸುಮ ಎಷ್ಟು ಚನ್ನಾಗಿದೆ ಅಲ್ವಾ ಕಥೆ ಮನುಷ್ಯ ಕಾಡಲ್ಲಿದ್ದು ಇಷ್ಟೆಲ್ಲ ಸಾಧನೆ ಮಾಡಿದ್ನಾ! ಕೇಳಿದ್ರೆ ಇನ್ನೂ ಕೇಳಬೇಕು ಅನ್ಸುತ್ತೆ' ಎಂದಳು. 'ಹೌದು ಮಗ, ಮನುಷ್ಯ ತನ್ನ ಬುದ್ಧಿಶಕ್ತಿಯನ್ನು ಉಪಯೋಗಿಸಿ ತುಂಬ ಸಾಧನೆ ಮಾಡಿ ಇವತ್ತು ಈ ಆಧುನಿಕ ಜಗತ್ತಿನಲ್ಲಿ ನಿಂತಿದ್ದಾನೆ. ನಮಗೆ ಇವತ್ತು ಎಲ್ಲವೂ ಬೇಕು. ಆದರೆ ಊಟ, ಬಟ್ಟೆ, ಮನೆ, ಇವಿಲ್ಲದೆ ಇವತ್ತಿಗೂ ಬದುಕಲು ಸಾಧ್ಯವಿಲ್ಲ.' ಎಂದಳು ಅಮ್ಮ. ಆಗ ರವಿ 'ಅಮ್ಮ ನಮಗೆ ನೀರು ಬೆಳಕು, ಶಾಖ ಇವು ಇಲ್ಲದೇ ಬದುಕಲು ಸಾಧ್ಯವಿಲ್ಲ ಅಲ್ವಾ ಅಮ್ಮ? 'ಹೌದು ಮಗ, ಇದು ನಮಗೆ ಮತ್ತು ಇತರ ಜೀವಜಗತ್ತಿಗೆ ಈ ಪ್ರಕೃತಿ ನಿರಂತರವಾಗಿ ನೀಡುತ್ತಿದೆ' ಎಂದಳು. ಸೋಮಜ್ಜಿಯ ಕಾರಣದಿಂದ ರವಿ ಮತ್ತು ಸುಮತಿ ಅಮ್ಮನಿಂದ ಬಹಳಷ್ಟು ಮಾಹಿತಿಯನ್ನು ಪಡೆದುಕೊಂಡರು.

ರವಿ ಸುಮತಿಗೆ 'ಪುಟ್ಟಿ ನಾನು ನೀನು ಇವತ್ತು ಒಂದು ಪಟ್ಟಿ ಮಾಡೋಣ ಮನುಷ್ಯನಿಗೆ ತೀರಾಅಗತ್ಯವಿರುವ ವಸ್ತುಗಳು ಯಾವುದು? ತೀರಾ ಅಗತ್ಯವಿಲ್ಲದ ವಸ್ತುಗಳು ಯಾವುದು ಎಂಬುದನ್ನು ಪಟ್ಟಿ ಮಾಡೋಣ್ವಾ!' ಎಂದನು. ಅದಕ್ಕೆ ಸುಮತಿ ಆಯ್ತು ಅಣ್ಣ ಹಾಗೇ ಮಾಡೋಣ ಎಂದು ಹೊರಟರು. ಮಕ್ಕಳಲ್ಲಿ ಈ ಕುತೂಹಲ ಬಂದಿರುವುದನ್ನು ಗಮನಿಸಿದ ಅಮ್ಮ 'ಜಾಣ ಮಕ್ಕಳು' ಎಂದಳು. ಅಂದ ಹಾಗೇ

ರವಿ ನೀನು ಮಣ್ಣು ಬಳಸಿ ಏನಾದರೂ ಒಂದು ಮಾದರಿ ಮಾಡು' ಎಂದರು. ಅದಕ್ಕೆ ಸುಮತಿ 'ಅಣ್ಣನ ಜೊತೆ ನಾನು ಸೇರಿಕೊಳ್ಳುತ್ತೇನೆ' ಎಂದಳು. ಅಮ್ಮನ ಮಾತಿಗೆ ರವಿ 'ಆಯ್ತಮ್ಮ' ಎಂದನು.

****************************************************************************************************

| ಪರಿಸರ ಅಧ್ಯಯನ | ಪಾಠ–4 (ಮೈಲಿಗಲ್ಲು–4)<br>ಮಾನವನ ಅಗತ್ಯತೆಗಳು (ಅಭ್ಯಾಸ) | 3ನೆಯ ತರಗತಿ<br>2/5 |
|---|---|---|

## ಪ್ರಶ್ನಾವಳಿ

**ಸೂಚನೆಗಳು:** ಈ ಕೆಳಗಿನ ಪ್ರಶ್ನೆಗಳಿಗೆ ಮಕ್ಕಳಿಂದ ಉತ್ತರವನ್ನು ಮೌಖಿಕವಾಗಿ ಪಡೆದು ನಂತರ ಇದೇ ಹಾಳೆಯಲ್ಲಿ ಬರೆಸಿ ನಂತರ ಈ ಹಾಳೆಯನ್ನು ಶಿಕ್ಷಕರಿಗೆ ಮೌಲ್ಯಮಾಪನಕ್ಕಾಗಿ ನೀಡಿರಿ.

ಪ್ರಶ್ನೆಗಳಿಗೆ ಉತ್ತರಿಸಿರಿ:

1. ರವಿ ದಾರಿಯಲ್ಲಿ ಬರುವಾಗ ಏನನ್ನು ಗಮನಿಸಿದನು?
2. ರವಿಯ ಮನಸ್ಸಿನಲ್ಲಿ ಮೂಡಿದ ಪ್ರಶ್ನೆ ಯಾವುದು?
3. ಅವನ ಪ್ರಶ್ನೆಗೆ ಅಮ್ಮನ ಉತ್ತರವೇನು?
4. ಬದುಕಲು ತೀರಾ ಅಗತ್ಯವಿರುವ ವಸ್ತುಗಳು ಯಾವುವು?
5. ಸೋಮಜ್ಜಿಯ ಬದುಕಿಗೂ ನಮ್ಮ ಬದುಕಿಗೂ ಇರುವ ವ್ಯತ್ಯಾಸಗಳೇನು ನಿಮ್ಮ ಮಾತುಗಳಲ್ಲಿ ಹೇಳಿರಿ.
6. ಮಾನವ ಮೊದಲು ಹೇಗಿದ್ದ? ಅವನು ಊಟ, ಬಟ್ಟೆ, ಮನೆಗಾಗಿ ಏನು ಮಾಡಿಕೊಂಡಿದ್ದ?
7. ಮಾನವನ ಎರಡು ಮುಖ್ಯ ಶೋಧನೆಗಳು ಯಾವುವು?
8. ತೀರ ಅಗತ್ಯವಿಲ್ಲದ ಯಾವುದಾದರು ಐದು ವಸ್ತುಗಳನ್ನು ಪಟ್ಟಿ ಮಾಡಿ.
9. ಪ್ರಕೃತಿಯಿಂದ ದೊರಕುವ ತೀರ ಅಗತ್ಯ ವಸ್ತುಗಳು ಯಾವುವು?
10. ಮಣ್ಣನ್ನು ಬಳಸಿಕೊಂಡು ನಾವು ಏನೆಲ್ಲ ತಯಾರಿಸಬಹುದು?

DIET CHIKKAMAGALURU

| ಪರಿಸರ ಅಧ್ಯಯನ | ಪಾಠ–4 (ಮೈಲಿಗಲ್ಲು–4)<br>ಮಾನವನ ಅಗತ್ಯತೆಗಳು (ಅಭ್ಯಾಸ) | 3ನೆಯ ತರಗತಿ<br>3/5 |
|---|---|---|

## ಅಭ್ಯಾಸ ಚಟುವಟಿಕೆ

**ಮಾರ್ಗದರ್ಶಕರಿಗೆ ಸೂಚನೆಗಳು:** ಇಲ್ಲಿರುವ ವಸ್ತುಗಳನ್ನು ಬದುಕಲು ತೀರಅಗತ್ಯ ಇರುವ ವಸ್ತುಗಳು, ತೀರಅಗತ್ಯವಿಲ್ಲದ ವಸ್ತುಗಳು, ಅಂದಿನ ಕಾಲದ ವಸ್ತುಗಳು ಹಾಗೂ ಇಂದಿನ ಕಾಲದ ವಸ್ತುಗಳನ್ನಾಗಿ ವಿಂಗಡಿಸಿ ಬರೆಯಲು ತಿಳಿಸಿ. ನಂತರ ಈ ಹಾಳೆಯನ್ನು ಶಿಕ್ಷಕರಿಗೆ ಮೌಲ್ಯಮಾಪನಕ್ಕಾಗಿ ನೀಡಿರಿ.

(ಗುಹೆ, ಮಡಕೆ, ಬೆಂಕಿ, ಮನೆಗಳು, ಯಂತ್ರಗಳು ಕಣಜ, ಗೋದಾಮು, ತಿಂಡಿ ತಿನಿಸುಗಳು, ವಾಹನಗಳು, ಊಟ, ಬೇಟೆ, ಲೋಹದ ಪಾತ್ರೆಗಳು, ಕೈಗಾರಿಕೆಗಳು, ಪ್ರಾಣಿಗಳ ಚರ್ಮ, ವಿವಿಧ ಬಗೆಯ ಉಡುಪುಗಳು, ಮೊಬೈಲ್, ಟಿವಿ, ಚಕ್ರದ ಉಪಯೋಗ, ಗೆಡ್ಡೆಗೆಣಸು)

| ತೀರ ಅಗತ್ಯ ವಸ್ತುಗಳು | ತೀರ ಅಗತ್ಯವಿಲ್ಲದ ವಸ್ತುಗಳು | ಅಂದಿನ ಕಾಲದಲ್ಲಿ ಬಳಸುತ್ತಿದ್ದ ವಸ್ತುಗಳು | ಇಂದಿನ ಕಾಲದಲ್ಲಿ ಬಳಕೆಯಲ್ಲಿರುವ ವಸ್ತುಗಳು |
|---|---|---|---|
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |

DIET CHIKKAMAGALURU

| | | | |
|---|---|---|---|
| | | | |
| | | | |
| | | | |

| ಪರಿಸರ ಅಧ್ಯಯನ | ಪಾಠ–4 (ಮೈಲಿಗಲ್ಲು–4)<br>ಮಾನವನ ಅಗತ್ಯತೆಗಳು (ಮೌಲ್ಯಮಾಪನ) | 3ನೆಯ ತರಗತಿ<br>4/5 |
|---|---|---|

**ಆಟದ ನಿಯಮ**

**ಕೆರೆದಡ ಆಟದ ಮಾದರಿ:**

**ಮಾರ್ಗದರ್ಶಕರಿಗೆ ಸೂಚನೆಗಳು:**

- ಈ ಆಟವನ್ನು ಕೆರೆದಡ ಆಟದ ಮಾದರಿಯಲ್ಲಿ ಆಡಿಸುವುದು.
- ಮಾರ್ಗದರ್ಶಕರು ತೀರಅಗತ್ಯವಿರುವ ವಸ್ತುಗಳು ಮತ್ತು ತೀರಅಗತ್ಯವಿಲ್ಲದ ವಸ್ತುಗಳ ಪಟ್ಟಿ ಮಾಡಿಕೊಳ್ಳುವುದು.
- ಮಕ್ಕಳನ್ನು ನಿಲ್ಲಿಸಿ ಅವರ ಪಾದದ ಮುಂದೆ ಒಂದು ಗೆರೆಯನ್ನು ಎಳೆಯುವುದು.
- ಮಕ್ಕಳನ್ನು ಗೆರೆಯ ಮೇಲೆ ನಿಲ್ಲಿಸುವುದು.
- ತೀರ ಅಗತ್ಯ ವಸ್ತುಗಳ ಹೆಸರು ಹೇಳಿದಾಗ ಗೆರೆಯ ಮುಂದೆ ಹಾರಲು ತಿಳಿಸುವುದು.
- ತೀರ ಅಗತ್ಯವಲ್ಲದ ವಸ್ತುಗಳ ಹೆಸರು ಹೇಳಿದಾಗ ಗೆರೆಯ ಹಿಂದೆ ಹಾರಲು ತಿಳಿಸುವುದು.
- ತಪ್ಪಿದವರು ಆಟದಲ್ಲಿ ಸೋತಂತೆ ಎಂದು ತೀರ್ಮಾನಿಸುವ ಮೊದಲು ಮಕ್ಕಳಿಗೆ ಪುನಃ ಪುನಃ ಆಡಿಸಿ ಆಗಲೂ ಮಾಡದಿದ್ದಾಗ ಸೋತಂತೆ ಎಂದು ತೀರ್ಮಾನಿಸಿ ಮೌಲ್ಯಮಾಪನಕ್ಕಾಗಿ ಶಿಕ್ಷಕರಿಗೆ ವರದಿ ನೀಡುವುದು.



DIET CHIKKAMAGALURU

| ಪರಿಸರ ಅಧ್ಯಯನ | ಪಾಠ–4 (ಮೈಲಿಗಲ್ಲು–4)<br>ಮಾನವನ ಅಗತ್ಯತೆಗಳು ( ಮೌಲ್ಯಮಾಪನ) | 3ನೆಯ ತರಗತಿ<br>5/5 |
|---|---|---|

**ಮಾರ್ಗದರ್ಶಕರಿಗೆ ಸೂಚನೆಗಳು:**

- ಮಕ್ಕಳಿಗೆ ಸರಿಯಾದ ಸೂಚನೆ ನೀಡಿ ತನ್ನ ಸುತ್ತಮುತ್ತಲಿನ ಮಣ್ಣು ಹಾಗೂ ಕಲ್ಲುಗಳನ್ನು ಸಂಗ್ರಹಿಸಲು ಹೇಳುವುದು.
- ಸಂಗ್ರಹಿಸಿ ತಂದ ಬಳಿಕ ಅವುಗಳ ಬಣ್ಣ ಮತ್ತು ಅದರ ಉಪಯೋಗಗಳನ್ನು ಮಕ್ಕಳಿಗೆ ತಿಳಿಸಿಕೊಡುವುದು.
- ಅದರ ಬಗ್ಗೆ ಹೆಚ್ಚಿನ ಮಾಹಿತಿಗೆ ಶಿಕ್ಷಕರನ್ನು ಸಂಪರ್ಕಿಸುವುದು.
- ತನ್ನ ಸುತ್ತಮುತ್ತಲು ಸಿಗುವ ಒಳ್ಳೆಯ ಮಣ್ಣನ್ನುಒಂದಷ್ಟು ಆರಿಸಿ ಅದನ್ನು ನೀರಿನಲ್ಲಿ ಚನ್ನಾಗಿ ಕಲೆಸಿ (ಕಲೆಸುವಾಗ ಮಕ್ಕಳು ವೀಕ್ಷಿಸುವಂತೆ ಹೇಳುವುದು) ಮಕ್ಕಳಿಗೆ ನೀಡುವುದು.
- ಮಕ್ಕಳು ತಮಗೆ ಇಷ್ಟವಿರುವ ಮಣ್ಣಿನ ಮಾದರಿಗಳನ್ನು ಮಾಡಲು ಅವರಿಗೆ ಮಾರ್ಗದರ್ಶನ ಮಾಡುವುದು.
- ಮೌಲ್ಯಮಾಪನಕ್ಕಾಗಿ ಅದನ್ನು ಶಿಕ್ಷಕರ ಗಮನಕ್ಕೆ ತರುವುದು.



DIET CHIKKAMAGALURU



(ಮಕ್ಕಳ ಮಣ್ಣಿನ ಮಾದರಿ)

DIET CHIKKAMAGALURU